# ಉಪಕಥೆಗಳು

ಗಣಪಯ್ಯ ಶೆಟ್ಟಿಗಾರ, ಕಾಳಾವರ



# ಉಪಕಥೆಗಳು

ಗಣಪಯ್ಯ ಶೆಟ್ಟಿಗಾರ, ಕಾಳಾವರ

# “UPAKATHEGALU”

By : **K. Ganapayya Shettigar Kalavara**

Published by,
**Shamith Publications**
Sri Vanadurga Kalavara

**ಕೃತಿಯ ಹೆಸರು : ಉಪಕಥೆಗಳು**

**ಲೇಖಕರು : ಗಣಪಯ್ಯ ಶೆಟ್ಟಿಗಾರ, ಕಾಳಾವರ**

**ಮುದ್ರಣ : 2025**

**ಹಕ್ಕುಗಳು : ಪ್ರಕಾಶಕರು**

**ಪುಟಗಳು : 52**

**ಬೆಲೆ : ರೂ.100**

**ಮುದ್ರಣ : ಶಿವಂ ಗ್ರಾಫಿಕ್ಸ್**
**ಕೋಟೇಶ್ವರ**

# ಲೇಖಕರ ನುಡಿ

ಸಂಸ್ಕೃತಿಯ ಅರಿವು ಮರೆಯಾಗಿ ವ್ಯವಹಾರವೇ ಜೀವನದ ಜೀವನಾಡಿಯಾಗಿ ನಿಂತಾಗ ಬಾಳು ಬರಡಾಗುತ್ತದೆ. ಮಾನವ ಜನ್ಮ ದೊಡ್ಡದು, ಇದು ಹಾಳು ಮಾಡಲು ಬೇಡಿ ಹುಚ್ಚಪ್ಪಗಳಿರಾ ಎಂಬುದಾಗಿ ದಾಸರು ಹೇಳಿದ್ದಾರೆ. ಅಂದರೆ ಮನುಷ್ಯನು ಪಶುವಾಗದೆ ಪಶುಪತಿಯಾಗಬೇಕು, ಗುರಿಯಿಟ್ಟು ಕುರುಡು ನರಿಯನ್ನು ಹೊಡೆಯುವುದಕ್ಕಿಂತಲೂ ಗುರಿ ತಪ್ಪಿದರೂ ಹುಲಿಯನ್ನು ಹೊಡೆಯುವುದು ಲೇಸು ಅಂದರೆ ನಮ್ಮಲ್ಲಿ ಉನ್ನತ ಆದರ್ಶಗಳಿರಬೇಕು.

ದುಂಬಿಯು ಎಲ್ಲಾ ಬಗೆಯ ಹೂಗಳಿಂದ ಮಕರಂದವನ್ನು ಹೀರುವಂತೆ ನಾನು ಕೆಲವೊಂದು ಟಿ.ವಿ., ಮಾಧ್ಯಮಗಳಿಂದ ಹರಿಕಥಾ ಶ್ರವಣದಿಂದ ಯಕ್ಷಗಾನ ವೀಕ್ಷಣೆಯಿಂದ ಪುರಾಣ ಪ್ರವಚನದಿಂದ ಪುಸ್ತಕ ಓದುವ ಹವ್ಯಾಸದಿಂದ ಅಲ್ಲದೇ ಅಜ್ಜಿ ಹೇಳಿದ ಕಥೆ, ಗುರುಗಳು ಹೇಳಿದ ಕಥೆಗಳನ್ನು ಸಂಗ್ರಹಿಸಿ ದೇವಿ ಮಹಾಕಾಳಿಯ ಅನುಗ್ರಹದಿಂದ ಹಾಗೂ ಶ್ರೀ ಬ್ರಹ್ಮಲಿಂಗ ವೀರಭದ್ರ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ ಬಾರ್ಕೂರು ಇದರ ಆಡಳಿತ ಮೊಕ್ತೇಸರರು ಮತ್ತು ಸಹಮೊಕ್ತೇಸರರು ಹಾಗೂ ವಿವಿಧ ಮಂಡಳಿಯ ಅಧ್ಯಕ್ಷರು ಪದಾಧಿಕಾರಿಗಳು ಹಾಗೂ ಸದಸ್ಯರು ಇವರ ಸಂಪೂರ್ಣ ಆಶೀರ್ವಾದದೊಂದಿಗೆ ಉಪಕಥೆಗಳು ಎಂಬ ಲೇಖನವನ್ನು ರಚಿಸಿ ಓದುಗರ ಮುಂದೆ ಇರಿಸಿದ್ದೇನೆ.

▪ ಗಣಪಯ್ಯ ಶೆಟ್ಟಿಗಾರ,
ಕಾಳಾವರ

# ವಿಷಯ ಸೂಚಿಕೆ

1. ಗಣಪತಿಯ ಪೂಜೆ
2. ಆಗುವುದೆಲ್ಲಾ ಒಳ್ಳೆಯದಕ್ಕೆ
3. ಹಾಲು ಕುಡಿದು ಸತ್ತ ಹತ್ತು ಮಂದಿ ನೆಂಟರು
4. ಎರೆಹುಳು (ನಕ್ಕುಳು) ವಿನ ಮದುವೆ
5. ಆದರ್ಶ ದಂಪತಿಗಳು
6. ಟೆಟ್ಟರೆ– ಪಕ್ಷಿಗಳ ಸಾಹಸ
7. ಅಜ್ಜಿಗೆ ಗೌರವ ನೀಡಿ
8. ಎರಡು ಗಿಳಿ ಮರಿಗಳ ಕಥೆ
9. ಮಾತಿನ ಶಾಸ್ತ್ರ ಗೊತ್ತಿರಬೇಕು
10. ಹನುಮಂತನ ಸಾಹಸ
11. ಗಂಡ–ಹೆಂಡತಿ ಸಮಸ್ಯೆ
12. ಹಲ್ಲಿನ ಸಮಸ್ಯೆ
13. ಜೋಗಿಯ ಕಥೆ
14. ಬೇಡರ ಕಥೆ
15. ವಿಶ್ವಾಸವೇ ಮನುಷ್ಯನನ್ನು ರಕ್ಷಿಸುವುದು
16. ಕುರುಡನ ಹೆಂಡತಿ ಮಗುವಿಗೆ ಹಾಲು ಕುಡಿಸುವುದು
17. ಮೂರು ಜನ ದಡ್ಡರು
18. ಗ್ರಹಸ್ಥಾಶ್ರಮ
19. ಪೂರೈಸದ ಆಸೆಗಳು ಪುನರ್ ಜನ್ಮಕ್ಕೆ ಕಾರಣ
20. ದೇವೇಂದ್ರನ ಮೋಹ
21. ಆತುರ ದುಃಖಕ್ಕೆ ಕಾರಣ
22. ಹಸ್ತ ಸಾಮುದ್ರಿಕ
23. ದೇವರಲ್ಲಿ ಭಕ್ತನ ಬೇಡಿಕೆ
24. ತಂದೆಯ ಶವಕ್ಕೆ ಮಕ್ಕಳು ಹಣದ ಗಂಟು ಇಡುವುದು
25. ಈಶ್ವರನಿಗೆ ವಿಷ್ಣುವಿನ ಸಂದೇಶ

26. ಶ್ರೀಮಂತನ ಭವ್ಯವಾದ ಸೌದ
27. ಘೋರಿ ಮಹಮ್ಮದ್ ಮತ್ತು ಪ್ರಥ್ವೀರಾಜ
28. ಮನಸಿದ್ದರೆ ಮಾರ್ಗವಿದೆ (ಪ್ರಯೋಗ)
29. ಶಿಷ್ಯನಿಗೆ ಗುರುಗಳ ಉಪದೇಶ
30. ಪರ್ವತಗಳಿಗೂ ರೆಕ್ಕೆ
31. ಇಂದ್ರನು ಬ್ರಹ್ಮಹತ್ಯಾ ದೋಷ ಹಂಚಿದ್ದು
32. ಕಪೋತ ಪಕ್ಷಿಗಳ ಕಥೆ
33. ಕುಮಾರ ನಾಮಕ ವನದ ಕಥೆ :
34. ಅಪ್ಪನಿಗೆ ಮದುವೆ ಮಾಡಿಸಿದ ಮಗ
35. ಶಿಬಿರಾಜನ ದಾನ
36. ದಕ್ಷ ಪ್ರಜಾಪತಿಯಿಂದ ವಿದ್ಯಾಭ್ಯಾಸ
37. ಹೊಸ್ತಿಲ ಅಜ್ಜಿ
38. ಒಬ್ಬ ವ್ಯಾಪಾರಿಯ ಕಥೆ
39. ಸಾಧುವಿನ ಸಮುದ್ರ ಸ್ನಾನ
40. ರಾಣಿಯ ಕಣ್ಣೀರು
41. ಸನ್ಯಾಸಿಯ ಕಥೆ
42. ಸರ್ವಸಂಗ ಪರಿತ್ಯಾಗಿ
43. ಲೋಬಿ ಮತ್ತು ಮಹಾಲೋಬಿ
44. ಆಶ್ರಯದಾತ ಸಸ್ಯಲೋಕ
45. ಪಿತೃಋಣ ವಿಮೋಚನೆಯ ಮಹಾಲಯ
46. ಭಿಕ್ಷುಕನಿಗೆ ಭಗವಂತನು ಪ್ರತ್ಯಕ್ಷವಾದುದು
47. ಐದು ಜನರ ಗಂಡ ಮುಂಬೈಗೆ ಹೋದಾಗ
48. ಮಾಳವ ದೇಶದ ಬ್ರಾಹ್ಮಣನ ಕಥೆ
49. ಮೋಹಜಿತನ ಕಥೆ
50. ಶ್ರೀ ಭದ್ರಕಾಳಿ
51. ಕುಡುಕರ ಕಥೆ
52. ಭತ್ತ ಕುಟ್ಟುವ ಹಾಡುಗಳು

# 1.
# ಗಣಪತಿಯ ಪೂಜೆ



ವಕ್ರತುಂಡ ಮಹಾಕಾಯ ಸೂರ್ಯಕೋಟಿ ಸಮಪ್ರಭ।
ನಿರ್ವಿಘ್ನಂ ಕುರುಮೇ ದೇವ ಸರ್ವಕಾರ್ಯೇಷು ಸರ್ವದಾ॥

" ವಕ್ರವಾದ ಸೊಂಡಿಲು ಸಹಸ್ರ ಸೂರ್ಯರ ಕಾಂತಿಯುಳ್ಳ ಮಹಾಕಾಯದ ಓ ದೇವನೇ। ನಾವು ಮಾಡುವ ಎಲ್ಲಾ ಸತ್ಕಾರ್ಯಗಳು ತೊಂದರೆಯಿಲ್ಲದೆ ಸದಾ ನಮ್ಮನ್ನು ಕಾಪಾಡು

ಗಣಪತಿಯು ವಿಘ್ನಕಾರಕನೂ ಹೌದು. ವಿಘ್ನ ನಿವಾರಕನೂ ಹೌದು. ಯಾವುದೇ ಶುಭಕಾರ್ಯ ಮಾಡುವಾಗ ಪ್ರಥಮವಾಗಿ ಗಣಪತಿಯನ್ನು ಪೂಜಿಸಬೇಕು. ಪೂಜಿಸಿದರೆ ಯಾವುದೇ ತೊಂದರೆ ಬರುವುದಿಲ್ಲ, ಪೂಜಿಸದಿದ್ದರೆ ವಿಘ್ನಕಾರಕನಾಗುತ್ತಾನೆ.

ಉದಾ: ತಾರಕಾಸುರನಿಗೆ, ತಾರಕಾಕ್ಷ, ಕಮಲಾಕ್ಷ ಹಾಗೂ ವಿದ್ಯುನ್ಮಾಲಿ ಎಂಬ ಮೂರು ಮಂದಿ ಮಕ್ಕಳಿದ್ದರು. ತಮ್ಮ ತಂದೆಯ ವಧೆಯಾದ ನಂತರ ಇವರು ಬ್ರಹ್ಮದೇವನಿಂದ ವರವನ್ನು ಪಡೆದು ತಾರಕಾಕ್ಷನು ಬಂಗಾರದ ನಗರವನ್ನು, ಕಮಲಾಕ್ಷನು ಬೆಳ್ಳಿಯ ನಗರವನ್ನು ಹಾಗೂ ವಿದ್ಯುನ್ಮಾಲಿಗೆ ಲೋಹದ ನಗರವನ್ನು ಕೊಡಲಾಗಿತ್ತು.ಈ ನಗರಗಳನ್ನು ಆಕಾಶ, ಸ್ವರ್ಗ ಮತ್ತು ಪಾತಾಳದಲ್ಲಿ ಕಟ್ಟಲಾಗಿತ್ತು. ಶಿವನು ಗಣಪತಿಯನ್ನು ಪೂಜೆ ಮಾಡದೆ ತ್ರಿಪುರ ಸಂಹಾರ ಸಾಧ್ಯವಾಗಲಿಲ್ಲ. ಅಶರೀರ ವಾಣಿಯ ಮಾತಿನಂತೆ ಗಣಪತಿಯ ಪೂಜೆ ಮಾಡಿ ಮೂರು ಲೋಕಗಳ್ನು ಸಂಹಾರ ಮಾಡಿದ.

ಉದಾ: ರಾವಣನು ಮೊದಲು ಗಣಪತಿಯನ್ನು ಪೂಜಿಸದೆ ಶಿವನನ್ನು ಕುರಿತು ತಪಸ್ಸುಮಾಡಿ, ಪ್ರಾಣಲಿಂಗವನ್ನು ಪಡೆದು ಲಂಕೆಗೆ ತೆರಳುತ್ತಿರುವ ಸಮಯ ದಾರಿ ಮಧ್ಯದಲ್ಲಿ ಗಣಪತಿಯಿಂದ ವಿಘ್ನವುಂಟಾಯಿತು.

•

## 2. ಆಗುವುದೆಲ್ಲಾ ಒಳ್ಳೆಯದಕ್ಕೆ

ಒಂದೂರಿನ ರಾಜ ಮತ್ತು ಮಂತ್ರಿ ಕಾಡಿಗೆ ಹೋಗುತ್ತಾರೆ. ರಾಜ ಕಾಡಿನಲ್ಲಿ ಕುದುರೆ ಓಡಿಸುವಾಗ ಕೆಳಕ್ಕೆ ಬಿದ್ದು ಬಲಕೈಯ ಕಿರುಬೆರಳು ತುಂಡಾಗಿ ರಕ್ತ ಸುರಿಯುತ್ತದೆ. ಇದನ್ನು ನೋಡಿದ ಮಂತ್ರಿ ಆಗುವುದೆಲ್ಲಾ ಒಳ್ಳೆಯದಕ್ಕೆ ಎಂದು ಹೇಳಿದ. ಈ ಮಾತನ್ನು ಕೇಳಿದ ರಾಜನಿಗೆ ಸಿಟ್ಟು ಬಂತು. ಮಂತ್ರಿ ನೀನು ನನ್ನ ಜೊತೆಯಲ್ಲಿ ಬರುವುದು ಬೇಡ, ನಾನೊಬ್ಬನೇ ಹೋಗುತ್ತೇನೆ. ನೀನು ವಾಪಾಸು ಹೋಗು ಎಂದು ಹೇಳಿದ. ಅದಕ್ಕೆ ಮಂತ್ರಿ ಆಗುವುದೆಲ್ಲಾ ಒಳ್ಳೆಯದಕ್ಕೆ ಅಂತ ಹೇಳಿದ.

ರಾಜ ಕಾಡಿನಲ್ಲಿ ಮುಂದಕ್ಕೆ ಹೋಗುವಾಗ, ಇನ್ನೊಂದು ದೇಶದ ರಾಜ ಈತನನ್ನು ಸೆರೆಹಿಡಿದು ತನ್ನ ಊರಿಗೆ ಕರೆದುಕೊಂಡು ಹೋಗಿ ತನ್ನ ಸೇವಕರಲ್ಲಿ ಈತನನ್ನು ಮಾರಿ ಅಮ್ಮನಿಗೆ ಬಲಿ ಕೊಡುವಂತೆ ತಿಳಿಸಿದನು. ಅಲ್ಲಿಯ ಕಟುಕರು ರಾಜನನ್ನು ಪರೀಕ್ಷಿಸಿ ಇತನು ದೇವರಿಗೆ ಬಲಿ ಕೊಡಲು ಅಯೋಗ್ಯ, ಬಲಕೈಯ ಕಿರು ಬೆರಳನ್ನು ಕಳೆದುಕೊಂಡಿದ್ದಾನೆ ಅಂತ ಹೇಳಿ ರಾಜನನ್ನು ಬಿಟ್ಟರು. ಆಗ ರಾಜ ಆಗುವುದೆಲ್ಲಾ ಒಳ್ಳೆಯದಕ್ಕೆ ಎಂದು ಹೇಳಿ ತನ್ನ ಊರಿಗೆ ವಾಪಾಸು ಬಂದು ಮಂತ್ರಿಗೆ ನಡೆದ ಘಟನೆಯನ್ನು ತಿಳಿಸಿ, ನಾನು ನಿನ್ನನ್ನು ವಾಪಾಸು ಕಳುಹಿಸಿದ್ದೆ. ನನ್ನ ಜೊತೆಯಲ್ಲಿ ನೀನು ಬಂದಿದ್ದರೆ ನೀನು ಮಾರಿ ಅಮ್ಮನಿಗೆ ಬಲಿಯಾಗುತ್ತಿದ್ದೆ. ಆಗುವುದೆಲ್ಲಾ ಒಳ್ಳೆಯದಕ್ಕೆ ಎಂಬುದಾಗಿ ರಾಜನು ಹೇಳಿದನು.

•

## 3. ಹಾಲು ಕುಡಿದು ಸತ್ತ ಹತ್ತು ಮಂದಿ ನೆಂಟರು

ಒಂದಾನೊಂದು ಕಾಲದಲ್ಲಿ ಒಂದಾನೊಂದು ಊರಿನಲ್ಲಿ ಹದ್ದೊಂದು ಸರ್ಪವೊಂದನ್ನು ತನ್ನ ಕಾಲ ಉಗುರಿನಲ್ಲಿ ಅದುಮಿಕೊಂಡು ಮೇಲಕ್ಕೆ ಹಾರುತ್ತಿರುವಾಗ ಸರ್ಪಕ್ಕೆ ನೋವನ್ನು ಸಹಿಸಿಕೊಳ್ಳಗಾಗದೇ ವಿಷವನ್ನು ಕಾರಿತು.

ಆಗ ಹಾಲನ್ನು ಹೊತ್ತು ಸಂತೆ ವ್ಯಾಪರಕ್ಕೆ ಹೋಗುತ್ತಿದ್ದವನ ಹಾಲಿನ ಪಾತ್ರೆಗೆ ಬಿತ್ತು. ಅವನು ಸಂತೆಯಲ್ಲಿ ಬೇರೊಬ್ಬನಿಗೆ ಹಾಲನ್ನು ಮಾರಿದ. ಹಾಲನ್ನು ಕ್ರಯಕ್ಕೆ ತೆಗೆದುಕೊಂಡ ವ್ಯಕ್ತಿ ಮನೆಗೆ ಹೋಗಿ ಮನೆಗೆ ಬಂದಿದ್ದ ಹತ್ತು ಮಂದಿ ನೆಂಟರಿಗೆ ಆ ಹಾಲನ್ನು ಕಾಯಿಸಿ ಕುಡಿಯಲು ಕೊಟ್ಟನು. ಹಾವಿನ ವಿಷಪೂರಿತ ಹಾಲನ್ನು ಕುಡಿದ ಹತ್ತು ಮಂದಿ ನೆಂಟರು ಸತ್ತರು ಹಾಗಾದರೆ ಈ ಹತ್ತು ಮಂದಿ ನೆಂಟರ ಸಾವಿಗೆ ಕಾರಣರು ಯಾರು ?

•

## 4. ಎರೆಹುಳು (ನಕ್ಕುಳು)ವಿನ ಮದುವೆ

ಒಂದಾನೊಂದು ಕಾಲದಲ್ಲಿ ಭೂಲೋಕದಲ್ಲಿ ಮಳೆಗಾಲದಲ್ಲಿ ಮಣ್ಣಿನ ಅಡಿಭಾಗದಲ್ಲಿ ವಾಸ್ತವ್ಯವಿರುವ ನಕ್ಕುಳುವಿನ ತಂದೆ ತನ್ನ ಮಗಳಿಗೆ ಮದುವೆ ಮಾಡಿಸುವುದೋಸ್ಕರ ಹುತ್ತದಲ್ಲಿ ವಾಸ್ತವ್ಯವಿರುವ ಸರ್ಪವನ್ನು ಭೇಟಿಯಾಗಿ ಮಾತುಕತೆ ನಡೆಸಿದರು. ನನ್ನ ಮಗಳು ನಕ್ಕುಳು ಈಗ ಮಳೆಗಾಲವಾದ್ದರಿಂದ ದಷ್ಟ-ಪುಷ್ಟವಾಗಿ ಬೆಳೆದು ಮದುವೆ ಪ್ರಾಯಕ್ಕೆ ಬಂದಿರುತ್ತಾಳೆ. ನಿನ್ನ ಮಗ ಮರಿ ಸರ್ಪನಿಗೆ ಮದುವೆ ಮಾಡಿಸಿ ಕೊಡಲು ಕೇಳುತ್ತಾನೆ ಅದಕ್ಕೆ ಸರ್ಪ ಆಗಬಹುದು ಎಂಬ ಉತ್ತರವನ್ನು ಕೊಡುತ್ತಾನೆ. ಇದನ್ನು ಕೇಳಿದ ನಕ್ಕುಳುವಿನ ತಂದೆಗೆ ಖುಷಿಯಾಯಿತು.

ನಂತರ ಸರ್ಪನು-ನಕ್ಕುಳುವಿನಲ್ಲಿ ಈಗ ಮಳೆಗಾಲ, ಮಳೆಗಾಲ ಕಳೆದ ನಂತರ ಬೇಸಿಗೆಯಲ್ಲಿ ಮದುವೆಗೆ ಮಾತುಕತೆ ನಡೆಸುವ ಎಂಬುದಾಗಿ ಸರ್ಪ ಹೇಳುತ್ತದೆ. ಮಳೆಗಾಲ ಕಳೆದ ಮೇಲೆ ನಕ್ಕುಳು ಭೂಮಿಯ ಅಡಿಭಾಗಕ್ಕೆ ತೆರಳುತ್ತದೆ. ಮತ್ತೆ ಮೇಲೆ ಬರುವುದು ಇನ್ನೊಂದು ಮಳೆಗಾಲಕ್ಕೆ ಹಾಗಾಗಿ ಎರೆಹುಳು-ಸರ್ಪದ ಮದುವೆಯನ್ನು ಮುಂದೂಡಲಾಗಿದೆ. ಮುಂದಿನ ದಿನಾಂಕವನ್ನು ನಿರೀಕ್ಷಿಸಿ. •

## 5. ಆದರ್ಶ ದಂಪತಿಗಳು

ಆದರ್ಶ ದಂಪತಿಗಳಾಗಬೇಕಿದ್ದರೆ ಗಂಡು ಮತ್ತು ಹೆಣ್ಣಿನಲ್ಲಿ ಒಳ್ಳೆಯ ಗುಣಗಳಿರಬೇಕು.ಗುಣ ಎನ್ನುವುದು ಸಂತೆಯಲ್ಲಿ ಸಿಕ್ಕುವ ವಸ್ತುವಲ್ಲ. ಒಳ್ಳೆಯ ತಂದೆ-ತಾಯಿ, ಒಳ್ಳೆಯ ಗುರು ಹಾಗೂ ಸಜ್ಜನರ ಸಹವಾಸದಿಂದ ಈ ಗುಣ ಬರುತ್ತದೆ. ಗಂಡು-ಹೆಣ್ಣಿನಲ್ಲಿ ಹೊಂದಾಣಿಕೆ ಇಲ್ಲವೆಂದಾದರೆ ಎತ್ತು ಎರಿಗೆ-ಕೋಣ ನೀರಿಗೆ ಎಳೆದಂತಾಗುತ್ತದೆ. ಗಂಡು ಕುಲದೀಪಕನಾದರೆ ಹೆಣ್ಣು ಉಭಯಕುಲ ದೀಪಕಳು, ಪತ್ನಿಯಾದವಳಿಗೆ ಗಂಡನೇ ಆಭರಣ. ಪತಿಯು ಕುರುಡನಾಗಲೀ, ಕುಂಟನಾಗಲೀ, ದರಿದ್ರನಾಗಲಿ, ಆದರ್ಶ ಸತಿಗೆ ಅವನೇ ಪರಮಾತ್ಮ, ಗಂಡನಿಗೆ ಚಟವಿದ್ದರೆ ಹೆಂಡತಿಗೆ ಚಟವನ್ನು ಬಿಡಿಸುವ ಹಟ ವಿರಬೇಕು. ಪತಿಭಕ್ತಿ ಪರಾಯಣೆಯಾದ ಪತ್ನಿ ಇರುವ ಮನೆ ಒಟ್ಟಾರೆ ಎಲ್ಲಾ ತೀರ್ಥಗಳಿಗಿಂತ ಮಿಗಿಲಾದುದು. ಹೆಂಡತಿಯೊಬ್ಬಳು ಮನೆಯೊಳಗಿದ್ದರೆ ನನಗದು ಕೋಟಿ ರೂಪಾಯಿ ಹೆಂಡತಿಯೊಬ್ಬಳು ಮನೆಯೊಳಗಿದ್ದರೆ ನಾನೊಬ್ಬ ಬಲುದೊಡ್ಡ ಸಿಪಾಯಿ."

•

## 6. ಟಿಟ್ಟಿರೆ–ಪಕ್ಷಿಗಳ ಸಾಹಸ

ಒಂದು ದಿನ ರಾತ್ರಿ ದಾರಿಹೋಕನೊಬ್ಬ ಹೋಗುತ್ತಿರುವಾಗ ಟಿಟ್ಟಿರೆ ಪಕ್ಷಿಗಳು ತಮ್ಮ ಕಾಲುಗಳನ್ನು ಮೇಲಕ್ಕೆ ಮಾಡಿ, ನೆಲಕ್ಕೆ ಬೆನ್ನು ತಾಗಿಸಿ ಮಲಗಿಕೊಂಡಿದ್ದವು. ಇದನ್ನು ನೋಡಿದ ದಾರಿಹೋಕನು ಆ ಪಕ್ಷಿಗಳಲ್ಲಿ ಹೀಗೇಕೆ ಕಾಲು ಮೇಲೆ ಮಾಡಿ ಮಲಗಿದ್ದೀರಿ ಎಂದು ಕೇಳಿದನು. ಅದಕ್ಕೆ ಆ ಹಕ್ಕಿಗಳು ಹೀಗೆ ಹೇಳಿದುವಂತೆ, ಜಗತ್ತೆಲ್ಲಾ ಮಲಗಿ ನಿದ್ರಿಸುತ್ತಿದೆ. ಒಂದು ವೇಳೆ ಆಕಾಶ ಎಲ್ಲಿಯಾದರೂ ಕಳಚಿ ಭೂಮಿಗೆ ಬಿದ್ದರೆ ಜನರೆಲ್ಲಾ ಸಾಯುತ್ತಾರೆ. ಆಕಾಶ ಭೂಮಿಗೆ ತಾಗದಂತೆ ನಾವು ತಡೆಯುವುದಕ್ಕೋಸ್ಕರ ಕಾಲುಗಳನ್ನು ಮೇಲೆ ಮಾಡಿ ಮಲಗಿದ್ದೇವು ಎಂಬುದಾಗಿ ಉತ್ತರ ಕೊಟ್ಟವಂತೆ. ಆಕಾಶ ಬೀಳುತ್ತದೋ ಇಲ್ಲವೋ ಗೊತ್ತಿಲ್ಲ. ಹಕ್ಕಿಗಳಿಂದ ತಡೆಯುವುದಕ್ಕೆ ಆಗುತ್ತದೋ ಇಲ್ಲವೋ ಗೊತ್ತಿಲ್ಲ. ಅಂತೂ ಈ ಹಕ್ಕಿಗಳಿಗೆ ಪ್ರಜ್ಞೆ ಇದೆ. ನಮ್ಮಲ್ಲಿಯೂ ಅಂತ ಪ್ರಜ್ಞೆ ಇರಬೇಕು. •

## 7. ಅಜ್ಜಿಗೆ ಗೌರವ ನೀಡಿ

ನಾನೊಮ್ಮೆ ಕನಕಪುರ ಬಸ್ಸಿನಲ್ಲಿ ಪ್ರಯಾಣಿಸುತ್ತಿರುವಾಗ ಅದೇ ಬಸ್ಸಿಗೆ 18ರ ಹರೆಯದ ಯುವತಿಯೊಬ್ಬಳು ಮಿನಿ ಸ್ಕರ್ಟ್ ಧರಿಸಿ ಬಸ್ಸು ಹತ್ತಿ ಬಸ್ಸಿನ ಬಲಭಾಗದ ಮಧ್ಯದ ಸೀಟಿನಲ್ಲಿ ಕುಳಿತುಕೊಂಡಳು. ಅದೇ ಬಸ್ಸಿನ ಎಡಭಾಗದ ಸೀಟಿನಲ್ಲಿ ಒಬ್ಬರು ಅಜ್ಜಿ ಕುಳಿತುಕೊಂಡರು. ಅಜ್ಜಿ ಯುವತಿ ಧರಿಸಿದ್ದ ಮಿನಿ ಸ್ಕರ್ಟ್‌ನ್ನು ನೋಡಿ ಈ ಮಿನಿ ಸ್ಕರ್ಟ್ ಎಲ್ಲಿ ಸಿಗುತ್ತದೆ ಎಂದು ಕೇಳಿದರು. ಅದಕ್ಕೆ ಆ ಯುವತಿ ನಮ್ಮ ಮನೆಯ ತೋಟದಲ್ಲಿ ಬೆಳೆಸಿದ್ದು ಎಂದಳಾಕೆ. ಅಜ್ಜಿ ಬಿಡಲಿಲ್ಲ. ಇಷ್ಟು ಬೇಗ ಸ್ಕರ್ಟ್‌ನ್ನು ತೋಟದಿಂದ ಯಾಕೆ ಕ್ಕೊದೆ ಅಮ್ಮ. ಇನ್ನು ಮೂರು ತಿಂಗಳು ಬಿಟ್ಟಿದ್ರೆ ಇನ್ನು ಮೂರು ಅಡಿ ಉದ್ದ ಬೆಳೆಯುತ್ತಿತ್ತು ಎಂದರು. ಆಗ ಯುವತಿ ಗೊಣಗುತ್ತಾ ಅಜ್ಜಿಗೆ ಅರಳು–ಮರಳು ಎಂದಳು. ಆಗ ಅಜ್ಜಿ ನಗುತ್ತಾ ಮಗೂ ಇಲ್ಲಿ ಕೇಳು, ನನಗೆ ಅರಳು–ಮರಳು ಅಲ್ಲ, ಅರವತ್ತು ವರ್ಷದ ನಂತರ ಮರಳಿ ಅರಳುತ್ತಾರೆ ಎಂಬುದಾಗಿ ಬೇಂದ್ರೆಯವರು ಹೇಳಿದ್ದಾರೆ. ವಿಷಯ ಏನೇ ಇರಲಿ ಹೆಣ್ಣು ಮಕ್ಕಳು ತಮ್ಮ ಮಾನವನ್ನು ಹರಾಜು ಹಾಕಬಾರದು ಎಂಬುದೇ ಅಜ್ಜಿಯ ಉದ್ದೇಶ, ಪ್ರತಿಯೊಬ್ಬರ ಮನೆಯಲ್ಲಿ ಅಜ್ಜಿ–ಅಜ್ಜ ಇರುತ್ತಾರೆ. ಅವರನ್ನು ಗೌರವಿಸುವುದು ಕಿರಿಯರ ಕರ್ತವ್ಯ. •

## 8. ಎರಡು ಗಿಳಿ ಮರಿಗಳ ಕಥೆ

ಒಂದು ಕಾಡಿನಲ್ಲಿ ಎರಡು ಗಿಳಿ ಮರಿಗಳಿದ್ದವು. ಒಂದು ದಿವಸ ಆ ಕಾಡಿನ ದಾರಿಯಲ್ಲಿ ಒಬ್ಬ ಸಾಧುವು ಹೋಗುತ್ತಿರುವಾಗ ಒಂದು ಗಿಳಿ ಮರಿಯನ್ನು ತೆಗೆದುಕೊಂಡು ಆಶ್ರಮದ ಕಡೆಗೆ ಹೋದರು.. ಅದೇ ದಾರಿಯಲ್ಲಿ ಬರುತ್ತಿದ್ದ ಕಟುಕನೊಬ್ಬನು ಇನ್ನೊಂದು ಗಿಳಿ ಮರಿಯನ್ನು ತೆಗೆದುಕೊಂಡು ತನ್ನ ಹಳ್ಳಿಯ ಕಡೆಗೆ ಹೋದನು.

ಸಾಧು ಸಾಕಿದ ಗಿಳಿಯು ಆಶ್ರಮಕ್ಕೆ ಯಾರಾದರೂ ಬಂದರೆ ಬನ್ನಿ ಕುಳಿತುಕೊಳ್ಳಿ, ವಿಶ್ರಾಂತಿಪಡೆಯಿರಿ, ಹಣ್ಣುಗಳನ್ನು ಸೇವಿಸಿರಿ ಎಂದು ಹೇಳಿ ಸ್ವಾಗತಿಸುತ್ತಿತ್ತು. ಆದರೆ ಕಟುಕ ಸಾಕಿದಗಿಳಿಯು ಯಾರಾದರೂ ಅವರ ಮನೆಗೆ ಬಂದರೆ ಅವನನ್ನು ಹಿಡಿ, ಹೊಡಿ, ಕಡಿ ಎಂಬುದಾಗಿ ಹೇಳುತ್ತಿತ್ತು. ಇದು ಸಂಗ ದೋಷದ ಪರಿಣಾಮ, ಯಾರೇ ಆಗಲಿ ಸಜ್ಜನರ ಸಹವಾಸ ಮಾಡಿದರೆ ಒಳ್ಳೆಯವರಾಗುತ್ತಾರೆ. ದುಷ್ಟರ ಸಹವಾಸ ಮಾಡಿದರೆ ದುಷ್ಟರಾಗುತ್ತಾರೆ., ಬೇರೆಯವರ ಸಹವಾಸ ಮಾಡುವಾಗ ಎಚ್ಚರದಿಂದಿರಿ. •

## 9. ಮಾತಿನ ಶಾಸ್ತ್ರ ಗೊತ್ತಿರಬೇಕು.

ಮಾತಿನ ಶಾಸ್ತ್ರ ಎಂದರೆ
ಏನು ಮಾತನಾಡಬೇಕು – ಏನು ಮಾತನಾಡಬಾರದು
ಹೇಗೆ ಮಾತನಾಡಬೇಕು – ಹೇಗೆ ಮಾತನಾಡಬಾರದು
ಎಷ್ಟು ಮಾತನಾಡಬೇಕು – ಎಷ್ಟು ಮಾತನಾಡಬಾರದು
ಎಲ್ಲಿ ಮಾತನಾಡಬೇಕು – ಎಲ್ಲಿ ಮಾತನಾಡಬಾರದು
ಯಾವಾಗ ಮಾತನಾಡಬೇಕು – ಯಾವಾಗ ಮಾತನಾಡಬಾರದು.

ಇದನ್ನೆಲ್ಲಾ ಮಾತಿನ ಶಾಸ್ತ್ರ ಎಂದೇ ಕರೆಯಬೇಕು
ನುಡಿದ ಮಾತುಗಳನ್ನೇ ಪದೇ ಪದೇ ನುಡಿಯಬಾರದು
ನುಡಿಯ ಬಾರದ ಮಾತುಗಳನ್ನು ನುಡಿಯಲೇಬಾರದು
ನುಡಿಯ ಮುತ್ತುಗಳು ಸತ್ಯವಾದ ನುಡಿ ಮುತ್ತುಗಳಂತೆ ಇರಲಿ
ಮಾತಿನ ಮೇಲೆ ಗಮನವೇ ಧ್ಯಾನ.

ಮಾತುಗಳು ಯಾವಾಗಲೂ ಮಧುರವಾಗಿರಬೇಕು. ಯಾವುದೇ ಸಂದರ್ಭದಲ್ಲಿಯೂ ಯಾರ ಮನಸನ್ನೂ ನೋಯಿಸಬಾರದು. ಮೌನವೇ ಆತ್ಮಜ್ಞಾನಿಗಳ ಭಾಷೆ (ಮೌನಂ ಪಂಡಿತಂ ಲಕ್ಷಣಂ)ಮೌನವಾಗಿರುವುದರಿಂದ ಜಗಳ, ಮನಸ್ತಾಪ ಬರುವುದಿಲ್ಲ. ಕೈಯಿಂದ ಹೊಡೆದ ಪೆಟ್ಟಿನ ನೋವು ಕ್ಷಣಿಕ, ಆದರೆ ನಾಲಿಗೆ ಜಾರಿ ಇನ್ನೊಬ್ಬರ ಹೃದಯವನ್ನು ಗಾಯಗೊಳಿಸಿದರೆ ಜೀವನ ಪೂರ್ತಿ ಮಾಯದೇ ಉಳಿಯಬಹುದು.

ನಾಲಿಗೆ ನಾಲ್ಕು ರೀತಿಯ ಪಾಪಗಳನ್ನು ಮಾಡುವುದು.

ಸುಳ್ಳಾಡುವುದು

ಪರನಿಂದೆ ಮಾಡುವುದು

ಪರರ ದೋಷಗಳನ್ನು ಎತ್ತಿಡುವುದು

ಅತಿಯಾಗಿ ಮಾತಾಡುವುದು.

ಮಾತು ಬಲ್ಲವನಿಗೆ ಜಗಳವಿಲ್ಲ, ಊಟ ಬಲ್ಲವನಿಗೆ ರೋಗವಿಲ್ಲ, ಎಂಬ ಮಾತಿದೆ.

ಮಾತು ಬೆಳ್ಳಿ –ಮೌನ ಬಂಗಾರ

ಮಾತು ಆಡಿದರೆ ಹೋಯ್ತು, ಮುತ್ತು ಒಡೆದರೆ ಹೋಯ್ತು.

•

## 10. ಹನುಮಂತನ ಸಾಹಸ

ಒಂದು ದಿನ ಹನುಮಂತನು ಸೂರ್ಯದೇವನನ್ನು ಒಂದು ಹಣ್ಣೆಂದು ತಿಳಿದು ಭ್ರಮಿಸಿ ಸೂರ್ಯನತ್ತ ಹಾರ ತೊಡಗಿದನು ಇದನ್ನು ಕಂಡು ಭಯಭೀತನಾದ ಸೂರ್ಯದೇವನು ಇಂದ್ರನ ನೆರವು ಕೇಳಿದನು ಇಂದ್ರನು ತನ್ನ ವಜ್ರಾಯುಧದಿಂದ ಹನುಮಂತನಿಗೆ ಹೊಡೆದ. ಇದರಿಂದ ಕುಪಿತನಾದ ವಾಯುದೇವ ತನ್ನ ದಿನನಿತ್ಯದ ಕರ್ತವ್ಯವನ್ನು ಮಾಡದೆ ಸುಮ್ಮನುಳಿದ. ಎಲ್ಲಾ ಜೀವಿಗಳು ಉಸಿರುಕಟ್ಟಿ ನರಳತೊಡಗಿದರು. ಇಂದ್ರನ ಕೃತ್ಯದಿಂದ ಬ್ರಹ್ಮನಿಗೂ ಕೋಪ ಉಂಟಾಯಿತು. ಎಲ್ಲಾ ದೇವತೆಗಳು ವಾಯುವಿನ ಕ್ಷಮೆಯಾಚಿಸಿದರು. ನಂತರ ವಾಯು ತನ್ನ ಕರ್ತವ್ಯಕ್ಕೆ ತೊಡಗಿದನು.

•

## 11. ಗಂಡ–ಹೆಂಡತಿ ಸಮಸ್ಯೆ

ಒಂದಾನೊಂದು ಕಾಲದಲ್ಲಿ ಒಂದಾನೊಂದು ಊರಿನಲ್ಲಿ ಗಂಡ–ಹೆಂಡತಿಯರೀರ್ವರು ಅನ್ಯೋನ್ಯವಾಗಿ ಸಂಸಾರ ಮಾಡಿಕೊಂಡಿದ್ದರು. ಒಂದು ದಿನ ಹೆಂಡತಿ ಗಂಡನಲ್ಲಿ ಮನೆ ಖರ್ಚಿಗೆ ಬೇಕಾಗಿ ಎರಡು ಸಾವಿರ ರೂಪಾಯಿ ಕೊಡುವಂತೆ ಕೇಳುತ್ತಾಳೆ. ಆಗ ಗಂಡ ತನ್ನಲ್ಲಿ ಈಗ ಹಣ ಇಲ್ಲ. ಅದರ ಬದಲು ಎರಡು ಸಾವಿರ ಮುತ್ತು ಕೊಡುವುದಾಗಿ ಹೇಳಿ ಹೆಂಡತಿಗೆ 2000 ಮುತ್ತು ಕೊಡುತ್ತಾನೆ. ಮರುದಿನ ಹೆಂಡತಿ ಹೀಗೆ ಹೇಳುತ್ತಾಳೆ. ನೀವು ಕೊಟ್ಟ ಎರಡು ಸಾವಿರ ಮುತ್ತಿನಲ್ಲಿ ಹಾಲಿನವನಿಗೆ 500 ಮುತ್ತು ಪೇಪರ್‌ನವನಿಗೆ 500 ಮುತ್ತು ಹಾಗೂ ಪಕ್ಕದ ಮನೆಯ ಅಂಗಡಿ ಮಾಲೀಕ ಶಿವಪ್ಪನಿಗೆ 1000 ಮುತ್ತು ಕೊಡುವುದಾಗಿ ಹೇಳುತ್ತಾಳೆ. ಆಗ ಗಂಡ ಹೇಳುತ್ತಾನೆ ನಾನು ಕೊಟ್ಟ ಮುತ್ತು ಅವರಿಗೆಲ್ಲಾ ಕೊಡಬಾರದು. ಅದು ನಿನ್ನಲ್ಲಿಯೇ ಇರಬೇಕು ಎಂದು ಹೇಳಿ ಹೆಂಡತಿಯ ಖರ್ಚಿಗೆ 2000 ರೂಪಾಯಿ ಕೊಡುತ್ತಾನೆ ಆಗ ಹೆಂಡತಿ ಹೇಳುತ್ತಾಳೆ ಹಾಗೆ ದಾರಿಗೆ ಬನ್ನಿ ಎಂಬುದಾಗಿ. •

## 12. ಹಲ್ಲಿನ ಸಮಸ್ಯೆ

ದೊಡ್ಡೂರು ಪಕ್ಕದಲ್ಲಿ ಚಿಕ್ಕೂರು ಇದೆ. ಇಲ್ಲಿ ಸುಮಾರು ಎಂಭತ್ತು ವರ್ಷ ಪ್ರಾಯದ ಒಬ್ಬರು ಹಿರಿಯ ನಾಗರಿಕರಿದ್ದರು. ಆ ಊರಿನ ಜನರು ಅವರನ್ನು ತಾತ ಎಂಬುದಾಗಿ ಕರೆಯುತ್ತಿದ್ದರು. ತಾತ ಭಾಷಣ ಕಲೆಯಲ್ಲಿ ಪಳಗಿದವರು. ಹಿಂದೊಮ್ಮೆ ಚಿಕ್ಕೂರಿನ ಜನರು ತಾವು ನಿಯೋಜಿಸಿದ ಗಣರಾಜ್ಯೋತ್ಸವ ಸಮಾರಂಭದ ಕಾರ್ಯಕ್ರಮಕ್ಕೆ ಭಾಷಣಕಾರನಾಗಿ ತಾತನನ್ನು ಕರೆಯಿಸಿದರು. ತಾತನ ಭಾಷಣ ಪ್ರಾರಂಭವಾಯ್ತು. ಭಾಷಣಕ್ಕೆ ಒಂದು ಗಂಟೆ ಕಾಲಾವಧಿ ನೀಡಲಾಗಿತ್ತು. ತಾತ ಹತ್ತು ನಿಮಿಷ ಭಾಷಣ ಮಾಡಿ ಭಾಷಣವನ್ನು ನಿಲ್ಲಿಸಿದರು.

ಆಗ ಪ್ರಾಯೋಜಕರು ಭಾಷಣವನ್ನು ಮುಂದುವರೆಸಲು ಹೇಳಿದರು. ಆಗ ತಾತ ಹೇಳಿದರು– ಹಲ್ಲಿನ ಸಮಸ್ಯೆ ಎಂಬುದಾಗಿ, ಹಲ್ಲು ನೋವಿದೆಯಾ ಎಂದು ಕೇಳಿದಾಗ ತಾತ ಹೇಳಿದರು. ಹಲ್ಲು ನೋವಿಲ್ಲ ಹಲ್ಲಿನ ಸೆಟ್ಟನ್ನು ಮರೆತು ಬಿಟ್ಟು ಬಂದಿದ್ದೇನೆ ಎಂಬುದಾಗಿ ಹೇಳಿದರಂತೆ. ಮತ್ತೊಮ್ಮೆ ಚಿಕ್ಕೂರಿನ ಗಣೇಶೋತ್ಸವ ಕಾರ್ಯಕ್ರಮಕ್ಕೆ ತಾತನನ್ನ ಕರೆಸಿ ಭಾಷಣಕ್ಕೆ ಹತ್ತು ನಿಮಿಷ ಸಮಯ ನಿಗದಿ ಪಡಿಸಿದರಂತೆ. ತಾತ

ಭಾಷಣ ಶುರು ಮಾಡಿದರು. ಹತ್ತು ನಿಮಿಷ ಕಳೆದು ಒಂದು ಗಂಟೆಯ ತನಕ ಭಾಷಣ ಮಾಡಿದರಂತೆ ಆಗ ಸಮಿತಿಯ ಸದಸ್ಯರು ಕೇಳಿದರಂತೆ  ನಿಮಗೆ ಹತ್ತು ನಿಮಿಷ ಭಾಷಣಕ್ಕೆ ಅವಕಾಶ ನೀಡಿದ್ದು , ನೀವು ಒಂದು ಗಂಟೆ ಭಾಷಣ ಮಾಡಿದ್ರಿ ಯಾಕೆಂತ ಕೇಳಿದ್ದಕ್ಕೆ "ಹಲ್ಲಿನ ಸಮಸ್ಯೆ ಎಂದರಂತೆ" ಅದಕ್ಕೆ ಸಮಿತಿಯವರು ಹಲ್ಲು ಸೆಟ್ ಹಾಕಿಕೊಳ್ಳಲಿಲ್ಲವಾ ಎಂದು ಕೇಳಿದರಂತೆ ಅದಕ್ಕೆ ತಾತ ಹೇಳಿದರು, ಹಲ್ಲು ಸೆಟ್ ಹಾಕಿಕೊಂಡು ಬಂದಿದ್ದೆ ಅವಸರದಲ್ಲಿ ನನ್ನ ಹೆಂಡತಿಯ ಹಲ್ಲು ಸೆಟ್ ಹಾಕಿಕೊಂಡು ಬಂದಿದ್ದೆ. ಹೆಂಗಸರಿಗೆ ಬಾಯಿ ಜಾಸ್ತಿ ಹಾಗಾಗಿ ಒಂದು ಗಂಟೆ ಭಾಷಣ ಮಾಡಿದೆ ಎಂದರಂತೆ ಅಲ್ಲಿ ಸಭೆ ಸೇರಿದ ಜನರು ನಕ್ಕು-ನಕ್ಕು ತೇಲಾಡಿದರಂತೆ ನಗೆಯ ಕಡಲಿನಲ್ಲಿ.. •

## 13. ಜೋಗಿಯ ಕಥೆ

ಹಸಿದ ಜೋಗಿಯೊಬ್ಬ ಭಿಕ್ಷೆಗಾಗಿ ಒಂದು ಮನೆಗೆ ಬಂದ. ಆ ಮನೆಯ ಸುಶೀಲೆ ಅವನನ್ನು ಒಳಕ್ಕೆ ಕರೆದು ಸ್ನಾನ ಮಾಡಿ ಊಟಕ್ಕೆ ಬರುವಂತೆ ತಿಳಿಸಿದಳು. ಆಗ ಆ ಜೋಗಿ ಸ್ನಾನ ಯಾಕೆ? "ಗೋವಿಂದೇತಿ ಸದಾ ಸ್ನಾನಂ" ಈಗ ನಾನು ಗೋವಿಂದನ ನಾಮ ಪಠಿಸಿದೆ. ಆದ್ದರಿಂದ ನಾನು ಸ್ನಾನ ಮಾಡಿದಂತೆ ಎಂದು ಆಕೆಗೆ ಹೇಳಿದನು.

ಆಗ ಆ ಹೆಂಗಸು, ಓ.. ಹಾಗೋ? "ರಾಮನಾಮವೃತಂ ಸದಾ ಭೋಜನಂ". ರಾಮನಾಮದಿಂದ ಸದಾ ಭೋಜನವನ್ನು ಮಾಡಿದಂತಾಗುತ್ತದೆ. ಅದನ್ನೇ ನಾನು ನಿಮಗೆ ನೀಡುತ್ತಿದ್ದೇನೆ. ಹೋಗು ಎಂದು ಹೇಳಿ ಅವನನ್ನು ಅಲ್ಲಿಂದ ಕಳುಹಿಸಿ ಕೊಟ್ಟಳು. •

## 14. ಬೇಡರ ಕಥೆ

ಅಂದು ಮಹಾಶಿವರಾತ್ರಿ. ಬೇಡರವನೊಬ್ಬನು ದಿನವೆಲ್ಲಾ ಕಾಡಿನಲ್ಲಿ ಸಂಚರಿಸಿದರೂ ಒಂದು ಮೃಗವೂ ಸಿಕ್ಕದೆ ದಣಿವು ಹಾಗೂ ಹಸಿವಿನಿಂದ ಬಳಲಿ ರಾತ್ರಿಯೆಲ್ಲಾ ರಕ್ಷಣೆಗಾಗಿ ಒಂದು ಬಿಲ್ವಪತ್ರೆ ಮರವನ್ನು ಹತ್ತಿ ಕುಳಿತುಕೊಳ್ಳುತ್ತಾನೆ. ನಿದ್ರೆ ಮಾಡಲಾಗದೆ ಬೇಸರ ಕಳೆಯುವುದಕ್ಕಾಗಿ ಆ ಬಿಲ್ವ ಪತ್ರೆಯ ಮರದ ಎಲೆಗಳನ್ನು ಒಂದೊಂದನ್ನೇ ಕಿತ್ತು ಕೆಳಗೆ ಹಾಕುತ್ತಾ ಕಾಲ ಕಳೆಯುತ್ತಾನೆ.

ಆ ಮರದ ಕೆಳಗೊಂದು ಶಿವಲಿಂಗವಿದ್ದುದರಿಂದ ಬೇಡನು ಕಿತ್ತು ಹಾಕಿದ ಬಿಲ್ವ ಪತ್ರೆಗಳೆಲ್ಲಾ ಆ ಶಿವಲಿಂಗದ ಮೇಲೆ ಬೀಳುತ್ತಿತ್ತು.

ಹಿಂದಿನ ಇಡೀ ದಿನವೆಲ್ಲಾ ಉಪವಾಸವಿದ್ದು ರಾತ್ರಿ ನಿದ್ರೆ ಮಾಡದೆ ಬಿಲ್ವಪತ್ರೆ ಎಲೆಗಳನ್ನು ಶಿವಲಿಂಗಕ್ಕೆ ಅರ್ಪಿಸಿದ್ದರಿಂದಾಗಿ ಬೇಡನು ಶಿವನ ಅನುಗ್ರಹಕ್ಕೆ ಪಾತ್ರನಾಗುತ್ತಾನೆ. ಶಿವನು ಬೇಡನನ್ನು ಕೈಲಾಸಕ್ಕೆ ಕರೆದುಕೊಂಡು ಹೋಗುತ್ತಾನೆ.

•

## 15. ವಿಶ್ವಾಸವೇ ಮನುಷ್ಯನನ್ನು ರಕ್ಷಿಸುವುದು

ತಾರಾಮತಿ ತನ್ನ ಬಳಿಯಲ್ಲಿದ್ದ ಚಿನ್ನವು ಕಳ್ಳರಿಂದ ಕಳವಾಗಬಹುದು ಎಂಬ ಸಂಶಯದಿಂದ ತನ್ನ ನೆರೆಮನೆಯ ಚಂದ್ರಹಾಸ ಎಂಬವರಲ್ಲಿ ವಿಶ್ವಾಸದಿಂದ ಇಟ್ಟುಕೊಳ್ಳುವರೇ ಕೊಡುತ್ತಾಳೆ.  ಚಂದ್ರಹಾಸನು ತಾರಾಮತಿಯು ಕೊಟ್ಟ ಚಿನ್ನವನ್ನು ಮನೆಯಲ್ಲಿ ಭದ್ರವಾಗಿ ಇರಿಸುತ್ತಾನೆ. ಹೀಗಿರುವಾಗ ಚಂದ್ರಹಾಸನು ಇಟ್ಟ ಬಂಗಾರವು ಕೆಲವೇ ದಿನಗಳಲ್ಲಿ ಕಳುವಾಗುತ್ತದೆ. ಈ ವಿಚಾರ ತಿಳಿದ ತಾರಾಮತಿ ತನ್ನ ಬಂಗಾರ ವಾಪಾಸು ಕೊಡುವಂತೆ ಚಂದ್ರಹಾಸನಲ್ಲಿ ಕೇಳುತ್ತಾಳೆ.ಚಂದ್ರಹಾಸನಿಗೆ ದಿಕ್ಕು ಕಾಣದೇ ಚಿಂತೆಯಲ್ಲಿ ಇರುವಾಗ ಊರಿನ ಕೆಲವರು ಚಂದ್ರಹಾಸನನ್ನು ಭೇಟಿಯಾಡಿ ಚಿನ್ನ ಕಳವಾದ ಬಗ್ಗೆ ಪೊಲೀಸರಿಗೆ ದೂರು ಕೊಡು, ನೀನು ತಾರಾಮತಿಗೆ ಚಿನ್ನ ಕೊಡುವ ಪ್ರಸಂಗ ಬರುವುದಿಲ್ಲ. ಎಂಬುದಾಗಿ ತಿಳಿಸಿದರು. ಅದಕ್ಕೆ ಚಂದ್ರಹಾಸನು ತಾರಾಮತಿಯು ನನ್ನಮೇಲೆ ಇಟ್ಟ ವಿಶ್ವಾಸಕ್ಕಾಗಿಯಾದರೂ ಅವಳ ಬಂಗಾರವನ್ನು ವಾಪಾಸು ಕೊಡದಿದ್ದರೆ ನಾನು ವಿಶ್ವಾಸದ್ರೋಹಿಯಾಗುತ್ತೇನೆ. ಎಂದು ಹೇಳಿ ತನ್ನ ಹೆಂಡತಿಯು ಬಳಿಯಿದ್ದ ಚಿನ್ನವನ್ನು ವಾಪಾಸು ಕೊಟ್ಟು ವಿಶ್ವಾಸವನ್ನು ಉಳಿಸಿಕೊಳ್ಳುತ್ತಾನೆ.

•

## 16.ಕುರುಡನ ಹೆಂಡತಿ ಮಗುವಿಗೆ ಹಾಲು ಕುಡಿಸುವುದು.

ಕುರುಡನ ಹೆಂಡತಿಯೊಬ್ಬಳು ಮಗುವಿಗೆ ಹಾಲು ಕುಡಿಸುತ್ತಿರುತ್ತಾಳೆ. ಆಗ ಮಗು ಜೋರಾಗಿ ಅಳುತ್ತಿರುತ್ತದೆ. ಆಗ ಕುರುಡ ಕೇಳುತ್ತಾನೆ. ಮಗು ಯಾಕೆ ಅಳುತ್ತಿದೆ ಅಂತ ಹೆಂಡತಿಯಲ್ಲಿ ಕೇಳುತ್ತಾನೆ. ಹೆಂಡತಿ ಹೇಳುತ್ತಾಳೆ. ಮಗುವಿಗೆ ಹಾಲು ಕುಡಿಸುತ್ತಿದ್ದೇನೆ ಅದಕ್ಕೆ ಮಗು ಅಳುತ್ತಿದೆ ಎಂಬುದಾಗಿ ಹೇಳಿದಳು.

ಆಗ ಕುರುಡ ಕೇಳಿದ ಹಾಲು ಹೇಗೆ ಇದೆ ಎಂಬುದಾಗಿ. ಆಗ ಹೆಂಡತಿ ಹೇಳಿದಳು ಬಿಳಿಯಾಗಿದೆ. ಗಂಡ ಕೇಳಿದ ಬಿಳಿ ಎಂದರೆ ಹೇಗಿದೆ ಎಂದು. ಕೊಕ್ಕರೆ ಹಾಗಿದೆ ಎಂದು ಹೆಂಡತಿ ಹೇಳಿದಳು. ಕೊಕ್ಕರೆ ಹೇಗಿದೆ ಎಂದು ಕುರುಡ ಕೇಳಿದ. ಹೆಂಡತಿ ಕೈಯಲ್ಲಿ ಮಾಡಿ ತೋರಿಸಿದಳು. ಅವನು ಹೆಂಡತಿಯ ಕೈಯನ್ನು ಮುಟ್ಟಿ ಅಂಕು–ಡೊಂಕಾಗಿರುವ ಕೊಕ್ಕರೆ ಹಾಗಿರುವ ಹಾಲನ್ನು ಮಗುವಿನ ಬಾಯಿಗೆ ತುರುಕುತ್ತಿದ್ದೀಯಾ ಎಂಬುದಾಗಿ ಹೆಂಡತಿಗೆ ಹೊಡೆದನು. •

## 17. ಮೂರು ಜನ ದಡ್ಡರು

ಒಂದಾನೊಂದು ಕಾಲದಲ್ಲಿ ಒಂದಾನೊಂದು ಊರಿನಲ್ಲಿ ಮೂರು ಜನ ದಡ್ಡರು ಹಗಲು ಹೊತ್ತಿನಲ್ಲಿ ಕಾಡು ದಾರಿಯಾಗಿ ನಡೆದುಕೊಂಡು ಹೋಗುತ್ತಿರುವಾಗ ಒಂದು ಕೊಳ ಕಾಣ ಸಿಕ್ಕಿತು. ಅಲ್ಲಿಯೇ ನಿಂತು ಕೊಳವನ್ನು ನೋಡುತ್ತಿರುವಾಗ ಒಂದು ಮರದಲ್ಲಿ ಜೇನು ಗೂಡು ನೇತಾಡುತ್ತಿರುವುದು ನೀರಿನಲ್ಲಿ ಪ್ರತಿಬಿಂಬ ಕಾಣಿಸಿತು. ಇದನ್ನು ನೋಡಿದ ಒಬ್ಬನು ಜೇನು ಗೂಡನ್ನು ಕಿತ್ತು ತರುವುದಾಗಿ ಹೇಳಿ ನೀರಿಗೆ ಹಾರಿದನು. ನೀರು ಅಲೆ ಅಲೆಯಾಗಿರುವುದರಿಂದ ಈತನು ಇನ್ನಿಬ್ಬರಿಗೆ ಕಾಣಿಸಲಿಲ್ಲ. ಅವನು ಪೂರ್ತಿ ಜೇನುತುಪ್ಪ ತಿನ್ನುತ್ತಾನೆಂದು ಇನ್ನೊಬ್ಬ ನೀರಿಗೆ ಹಾರಿದ. ಅವನೂ ಬರಲಿಲ್ಲ. 3ನೇಯವನೂ ನೀರಿಗೆ ಹಾರಿದ. 3 ಜನರೂ ಈಜಲೂ ಬಾರದ ಕಾರಣ ನೀರಿನಲ್ಲಿ ಮುಳುಗಿ ಸತ್ತರು. ಜ್ಞಾನದ ಕೊರತೆಯೇ ಇದಕ್ಕೆಲ್ಲಾ ಕಾರಣ. •

## 18. ಗ್ರಹಸ್ಥಾಶ್ರಮ

ಮದುವೆಯನ್ನು ಮಾಡಿಕೊಂಡು ಹೆಂಡತ–ಮಕ್ಕಳೊಡನೆ ಜೀವಿಸುತ್ತಿದ್ದ ಮಾತ್ರಕ್ಕೆ ಗ್ರಹಸ್ಥನೆನಿಸುವುದಿಲ್ಲ. ವರ್ಣಾಶ್ರಮ ಧರ್ಮಗಳನ್ನು ಬಿಡದೇ ಆಚರಿಸುತ್ತಾ ತನ್ನವರು,ಹೊರಗಿನವರು, ಚಿಕ್ಕವರು, ದೊಡ್ಡವರು ಎಂಬ ಭೇದವಿಲ್ಲದೇ ಸರ್ವ ಭೂತಗಳನ್ನು ತನ್ನಂತಯೇ ಭಾವಿಸುತ್ತಿರಬೇಕು.ತನ್ನನ್ನು ಆಶ್ರಯಿಸುವ ಪ್ರಾಣಿ ಕೋಟಿ ವಿಷಯದಲ್ಲಿ ಆದರ ಉಳ್ಳವನಾಗಿರಬೇಕು. ಲೋಕ ಜ್ಞಾನ ವಿಶೇಷತೆಗಳನ್ನು ಅರಿತವನಾಗಿರಬೇಕು. ಶಾಸ್ತ್ರ ಜ್ಞಾನವನ್ನು ಸಂಪಾದಿಸಿ ಇಹ–ಪರ ಚಿಂತನೆಗಳನ್ನು ಧರ್ಮ ರೀತಿಯಿಂದ ಚಿಂತಿಸಬೇಕು.

ಅಷ್ಟ ಮದಗಳನ್ನು ಅಡಗಿಸಿಟ್ಟವನಾಗಿರಬೇಕು. ದಾನ-ಧರ್ಮಗಳನ್ನು ಪರೋಪಕಾರವನ್ನು ಮಾಡಬೇಕು. ತನ್ನ ಬಾರ್ಯೆಯು ತನ್ನನ್ನು ನಂಬುವಂತೆ ನಡೆದುಕೊಳ್ಳುತ್ತಾ ಅವಳಲ್ಲಿ ಪೂರ್ಣ ನಂಬಿಕೆ, ವಿಶ್ವಾಸದಿಂದ ಕೂಡಿದವನಾಗಿರಬೇಕು. •

## 19. ಪೂರೈಸದ ಆಸೆಗಳು ಪುನಃಜನ್ಮಕ್ಕೆ ಕಾರಣ

ಗುರುಕುಲದಲ್ಲಿ ಗುರುವಿನ ಶಿಷ್ಯನೊಬ್ಬನು ಬ್ರಹ್ಮಚಾರಿಯಾಗಿ ಶಿಕ್ಷಣ ಕಲಿಯುತ್ತಿರುವಾಗ ಪ್ರಾಯ ಪ್ರಬುದ್ಧನಾಗಿ ಸಂಸಾರ ಜೀವನದಲ್ಲಿ ಆಸೆ ಹುಟ್ಟುತ್ತದೆ. ಗುರುಗಳೇ ನನಗೆ ಒಂದು ಆಸೆಯಾಗಿದೆ. ಮದುವೆಯಾಗಿ ಹೆಂಡತಿ-ಮಕ್ಕಳೊಂದಿಗೆ ಗ್ರಹಸ್ತನಾಗಿ ಇರಬೇಕೆಂದೆನಿಸುತ್ತದೆ. ಆಗ ಗುರುಗಳು ಆಗಲಿ ಶಿಷ್ಯ 10 ವರ್ಷ ಗ್ರಹಸ್ತನಾಗಿದ್ದು ಅನಂತರ ಗುರುಕುಲಕ್ಕೆ ವಾಪಾಸು ಬಾ ಎಂದರು.

10 ವರ್ಷಗಳು ಕಳೆದರೂ ಶಿಷ್ಯ ಬಾರದನ್ನು ನೋಡಿ ಶಿಷ್ಯನ ಮನೆಗೆ ಹೋಗುತ್ತಾರೆ. ದೂರದಿಂದ ಗುರುಗಳನ್ನು ನೋಡಿ ಶಿಷ್ಯ ಓಡಿ ಬಂದು ಗುರುಗಳಿಗೆ ನಮಸ್ಕರಿಸುತ್ತಾನೆ. ಗುರುಗಳು ಶಿಷ್ಯನಲ್ಲಿ ಗುರುಕುಲಕ್ಕೆ ಬರಲಿಕ್ಕೆ ಹೇಳುತ್ತಾರೆ. ಆಗ ಶಿಷ್ಯ ಗುರುಗಳೇ ನನಗೆ 4 ಜನ ಮಕ್ಕಳಿದ್ದಾರೆ. ನನ್ನ ಹೆಂಡತಿಗೆ ಮಕ್ಕಳನ್ನು ನೋಡಿಕೊಳ್ಳಲು ಆಗುವುದಿಲ್ಲ. ಇನ್ನು 5 ವರ್ಷ ಬಿಟ್ಟು ಬರುತ್ತೇನೆ ಎಂಬುದಾಗಿ ಹೇಳಿದ.

5 ವರ್ಷ ಬಿಟ್ಟು ಗುರುಗಳು ಪುನಃ ಶಿಷ್ಯನ ಮನೆಗೆ ಹೋಗುತ್ತಾರೆ. ಆಗ ಶಿಷ್ಯ ಗುರುವಿನಲ್ಲಿ ಸ್ವಾಮಿ ನನ್ನ ಮಕ್ಕಳು ಸಣ್ಣವರು, ಬುದ್ಧಿ ಬಂದಿಲ್ಲ, ನಾನು ತುಂಬಾ ಹಣ ಸಂಪಾದಿಸಿದ್ದೇನೆ. ನೋಡಿಕೊಳ್ಳುವವರಿಲ್ಲ. ಅಲ್ಲದೇ ಮಕ್ಕಳಿಗೆ ಮದುವೆ ಮಾಡಿಸಬೇಕು.ಇನ್ನೂ 10 ವರ್ಷ ಕಾಲಾವಧಿಯನ್ನು ಕೇಳುತ್ತಾನೆ, ಗುರುಗಳು ಒಪ್ಪಿಗೆ ನೀಡುತ್ತಾರೆ.

ಪುನಃ 10ವರ್ಷ ಕಳೆದ ನಂತರ ಗುರುಗಳು ಶಿಷ್ಯನ ಮನೆಗೆ ಹೋಗುತ್ತಾರೆ. ಶಿಷ್ಯ ಕಾಣುವುದಿಲ್ಲ. ಹೆಂಡತಿ ಹತ್ತಿರ ವಿಚಾರಿಸುತ್ತಾರೆ. ಗಂಡ ಸತ್ತಿರುವುದಾಗಿ ತಿಳಿಸುತ್ತಾಳೆ. ಆಗ ದೂರದಲ್ಲಿ ಕಟ್ಟಿ ಹಾಕಿದ ನಾಯಿಯನ್ನು ನೋಡುತ್ತಾರೆ ಗುರುಗಳು ಸತ್ತಿರತಕ್ಕಂತಹ ಶಿಷ್ಯ ಸಂಪತ್ತನ್ನು ಯಾರಾದರೂ ಕದಿಯಬಹುದು ಅದಕ್ಕಾಗಿ ಮನೆ ಕಾಯುವ ನಾಯಿಯಾಗಿ ಹುಟ್ಟಿರುವುದಾಗಿ ಗುರುಗಳು ತಿಳಿಸಿ ವಾಪಾಸು ಹೋಗುತ್ತಾರೆ.

ಪುನಃ 5 ವರ್ಷ ಬಿಟ್ಟು ಶಿಷ್ಯನ ಮನೆಗೆ ಬರುತ್ತಾರೆ. ನಾಯಿ ಕಾಣೆಯಾಗಿದೆ. ಶಿಷ್ಯನ ಹೆಂಡತಿಯಲ್ಲಿ ವಿಚಾರಿಸಲಾಗಿ ನಾಯಿ ಸತ್ತಿರುವುದಾಗಿ ತಿಳಿಸಿದರು. ಗುರುಗಳು ದಿವ್ಯ ದೃಷ್ಟಿಯಿಂದ ನೋಡಲಾಗಿ ನಾಯಿ–ಹಾವಾಗಿ ಜನಿಸಿ ಹಣದ ಗಂಟನ್ನು ಕಾಯುವ ಸಲುವಾಗಿ ಗೋಡೆಯ ತೂತಿನಲ್ಲಿ ಮಲಗಿಕೊಂಡಿದೆ, ಈ ವಿಚಾರವನ್ನು ಗುರುಗಳು ಶಿಷ್ಯನ ಹೆಂಡತಿ ಮಕ್ಕಳಿಗೆ ತಿಳಿಸಿ ತನ್ನ ಗುರುಕುಲಕ್ಕೆ ಹೋಗುತ್ತಾರೆ.

ನಂತರ ಮತ್ತೊಂದು ದಿವಸ ಗುರುಗಳು ಶಿಷ್ಯನ ಮನೆಗೆ ಬಂದು ನೋಡಲಾಗಿ ಶಿಷ್ಯನ ಹೆಂಡತಿ–ಮಕ್ಕಳು ಗೋಡೆಯ ತೂತಿನಲ್ಲಿ ಮಲಗಿದ್ದ ಹಾವಿಗೆ ಚೆನ್ನಾಗಿ ಹೊಡೆದು, ಗಾಯಗೊಳಿಸಿ ಮನೆಯಿಂದ ಓಡಿಸಿದ್ದಾರೆ. ನಂತರ ಶಿಷ್ಯನಿಗೆ ಬುದ್ಧಿ ಬಂತು, ಪುನಃ ಗುರುಕುಲಕ್ಕೆ ಹೋಗಿ ಸೇರುತ್ತಾನೆ. ಹೆಂಡತಿ–ಮಕ್ಕಳು ಐಶ್ವರ್ಯ ಯಾವುದೂ ಶಾಶ್ವತ ಅಲ್ಲ ಎಂಬುದು ಆಗ ಶಿಷ್ಯನಿಗೆ ಅರಿವಾಗುತ್ತದೆ. •

# 20. ದೇವೇಂದ್ರನ ಮೋಹ

ಯಾವುದೋ ಒಂದು ಶಾಪದ ಫಲವಾಗಿ ದೇವೇಂದ್ರ ಒಂದು ಸಲ ಹಂದಿಯಾಗಿ ಭೂಮಿಯಲ್ಲಿ ಜನಿಸಿದ. ಮಡದಿ ಮಕ್ಕಳೊಂದಿಗೆ ತನ್ನ ಸಮಯವನ್ನೆಲ್ಲಾ ಕೊಳೆ–ಕೆಸರುಗಳು ತುಂಬಿರುವಲ್ಲೇ ಕಳೆಯ ತೊಡಗಿದ. ಒಂದು ದಿನ ಇದನ್ನು ನೋಡಿದ ನಾರದರು "ಅಯ್ಯಾ" ದೇವೇಂದ್ರ ಏನಿದು ನಿನ್ನ ಅವಸ್ಥೆ? ಯಾಕೆ ಈ ರೀತಿಯ ಜೀವನವನ್ನು ನಡೆಸುತ್ತಿ? ನನ್ನ ಸಕಲ ತಪಸ್ಸಿನ ಫಲವನ್ನು ಧಾರೆಯೆರೆದು ನಿನ್ನನ್ನು ಈ ಸ್ಥಿತಿಯಿಂದ ಬಿಡುಗಡೆ ಮಾಡುತ್ತೇನೆ. ಸ್ವರ್ಗ ಸುಖ ವನ್ನು ಅನುಭವಿಸಬೇಕಾದ ನೀನು ಈ ಹೊಲಸು ಜೀವನವನ್ನು ನಡೆಸುವುದು ಯಾವ ದುಷ್ಕರ್ಮದ ಫಲ, ಎಂತಹ ಪಾಪ ಎಂದು ಸಹಾನುಭೂತಿಯಿಂದ ಹೇಳಿದ, ಆಗ ಹಂದಿಯ ರೂಪದಲ್ಲಿದ್ದ ಇಂದ್ರ, ನಾರದ ಯಾಕೆ ನನ್ನ ಆನಂದಕ್ಕೆ ಅಡ್ಡಿ ಉಂಟು ಮಾಡುತ್ತಿರುವೆ? ಈ ಕೆಸರು ನೀರಿನಲ್ಲಿ ಹೆಂಡತಿ–ಮಕ್ಕಳೊಂದಿಗೆ ನಾನು ಅನುಭವಿಸುವ ಆನಂದ ಸ್ವರ್ಗ ಲೋಕದಲ್ಲಿಯೂ ನನಗೆ ಸಿಗಲಾರದು ನನ್ನ ಸಂತೋಷಕ್ಕೆ ಭಂಗವುಂಟು ಮಾಡದೆ ದಯವಿಟ್ಟು ನೀನು ಬಂದ ದಾರಿಯಲ್ಲಿ ಹೋಗು ಎಂದು ಉತ್ತರಿಸಿದ. •

# 21. ಆತುರ ದುಃಖಕ್ಕೆ ಕಾರಣ

ಯಾವುದೇ ವ್ಯಕ್ತಿ ಸರಿಯಾದ ವಿವೇಚನೆಯನ್ನು ಮಾಡದೆ, ವಿವೇಕವನ್ನು ಉಪಯೋಗಿಸದೆ ಆತುರದಲ್ಲಿ ಏನಾದರೂ ಕೆಲಸವನ್ನು ಮಾಡಿದರೆ ಮುಂದೆ ಪಶ್ಚಾತ್ತಾಪ ಪಡಬೇಕಾಗುತ್ತದೆ. ಹಿಂದೊಮ್ಮೆ ದೇವಾಸುರ ಮಧ್ಯೆ ಯುದ್ಧ ಸಂಭವಿಸಿದಾಗ ದಶರಥ ಚಕ್ರವರ್ತಿ ದೇವತೆಗಳ ಪರವಾಗಿ ಯುದ್ಧಕ್ಕೆ ಹೋಗುವಾಗ ಆತ ಮಡದಿ ಕೈಕೇಯಿಯನ್ನು ರಥದಲ್ಲಿ ಕರೆದುಕೊಂಡು ಹೋಗಿದ್ದ. ಕೈಕೇಯಿ ಕಾಶ್ಮೀರ ರಾಜನ ಮಗಳು ಇವಳಿಗೆ ಯುದ್ಧ ವಿದ್ಯೆಗಳು ಶಸ್ತ್ರಾಸ್ತ್ರ ಪ್ರಯೋಗಗಳು ಚೆನ್ನಾಗಿ ಬರುತ್ತಿದ್ದವು. ಯುದ್ಧ ಮಧ್ಯದಲ್ಲಿ ದಶರಥನ ರಥದ ಒಂದು ಗಾಲಿಯ ಕೀಲು ತಪ್ಪಿಹೋಯಿತು

ಆಗ ತನ್ನ ಗಂಡನಿಗೆ ಸೋಲುಂಟಾಗಬಾರದು ಎಂಬ ಉದ್ದೇಶದಿಂದ ಕೈಕೇಯಿ ಆ ಚಕ್ರಕ್ಕೆ ತನ್ನ ಕೈಯ ಬೆರಳನ್ನೇ ಕೀಲಾಗಿ ಉಪಯೋಗಿಸಿದಳು. ಕೈಕೇಯಿ ಬೆರಳಿನಿಂದ ಧಾರಾಕಾರವಾಗಿ ರಕ್ತ ಸುರಿಯುತ್ತಿತ್ತು. ಜಯಶಾಲಿಯಾದ ದಶರಥ ನಿನ್ನಿಂದಾಗಿಯೇ ನನಗೆ ಜಯ ಲಭಿಸಿತು, ಯಾವುದೇ ಎರಡು ವರಗಳನ್ನು ಕೇಳು ಎಂದು ಸಂತಸದಿಂದ ಹೇಳಿದ. ಕೈಕೇಯಿ ಇಷ್ಟ ಬಂದ ಸಮಯದಲ್ಲಿ ಇಷ್ಟ ಬಂದ ವರಗಳನ್ನು ಕೇಳಿದಾಗ ದಶರಥ ಅಪಾರ ಶೋಕಕ್ಕೆ ಈಡಾದ. ಆತುರ ದುಃಖಕ್ಕೆ ಕಾರಣವಾಗುತ್ತದೆ.

•

# 22. ಹಸ್ತ ಸಾಮುದ್ರಿಕ

ಒಬ್ಬ ವ್ಯಕ್ತಿ ಹಸ್ತ ಸಾಮುದ್ರಿಕಾ ಶಾಸ್ತ್ರಜ್ಞನಲ್ಲಿಗೆ ಹೋಗಿ ಒಂದು ಸಲ ತನ್ನ ಹಸ್ತವನ್ನು ತೋರಿಸಿದ. ಅವನ ಕೈಯ ರೇಖೆಗಳನ್ನು ನೋಡಿ ಆ ಶಾಸ್ತ್ರಜ್ಞ ಅಯ್ಯ ನಿನ್ನ ಧನ ರೇಖೆ ಬಹಳ ಚೆನ್ನಾಗಿದೆ. ತುಂಬಾ ಸಂಪತ್ತನ್ನು ನೀನು ಪಡೆಯುತ್ತಿ ಎಂದು ಹೇಳಿದ. ಆಗ ಆ ವ್ಯಕ್ತಿ ಆನಂದದಿಂದ ಸರಿಯಾಗಿ ಕುಳಿತುಕೊಂಡ. ನಂತರ ಜ್ಯೋತಿಷಿ ನೀನು ಬಹಳ ಗೌರವ ಪ್ರತಿಷ್ಠೆಗಳನ್ನು ಹೊಂದುತ್ತಿ ಎಂದು ಆ ವ್ಯಕ್ತಿಯಲ್ಲಿ ಹೇಳಿದಾಗ ಆತನ ಸಂತಸ ಇನ್ನಷ್ಟು ಹೆಚ್ಚಾಯಿತು. ಮತ್ತೆ ಸ್ವಲ್ಪ ಹೊತ್ತು ಅವನ ಕೈಯನ್ನು ದಿಟ್ಟಿಸಿ ನೋಡಿ ನೀನು ಬಹು ಉನ್ನತ ಪದವಿಯನ್ನು ಅಲಂಕರಿಸುತ್ತೀಯಾ ಎಂದಾಗ ಆ ವ್ಯಕ್ತಿಗೆ ಆ ಕೂಡಲೇ ಪ್ರಧಾನಮಂತ್ರಿಯಾದಷ್ಟೇ ಹರ್ಷವಾಯಿತು.

ನೀನು ಸಾಕಷ್ಟು ಸಿರಿ–ಸಂಪತ್ತು, ಮಕ್ಕಳನೆಲ್ಲಾ ಪಡೆಯುತ್ತಿ ಎಂಬಿತ್ಯಾದಿ ಭವಿಷ್ಯ ವಾಣಿಯಿಂದ ಆ ವ್ಯಕ್ತಿ ವಿಶೇಷವಾಗಿ ಸಂತಸ ಪಟ್ಟನು. ಆತನ ಕೈಯನ್ನು ಇನ್ನು ಸ್ವಲ್ಪ ಕಾಲ ಪರೀಕ್ಷಿಸಿ ನಿನ್ನ ಆಯುಷ್ಯ ರೇಖೆ ಮಾತ್ರ ಬಹಳ ಚಿಕ್ಕದಾಗಿದೆ ಎಂದು ಹೇಳಿದ. ಇದನ್ನು ಕೇಳಿದೊಡನೆಯೇ ಸಂತೋಷದಿಂದ ಮೇಲಕ್ಕೆ ಎದ್ದಿದ್ದ ವ್ಯಕ್ತಿ ಕೆಳಕ್ಕೆ ಕುಸಿದು ಬಿದ್ದ.

ಮನುಷ್ಯರೇ ಸ್ಥಿರವಿಲ್ಲದಿರುವಾಗ ಈ ಭೋಗ–ಭಾಗ್ಯಗಳು, ಸ್ಥಾನ–ಮಾನಗಳು ಹೇಗೆ ತಾನೆ ಸ್ಥಿರವಾಗಿರಬಲ್ಲವು? ನಳ ಚಕ್ರವರ್ತಿ, ಸತ್ಯ ಹರಿಶ್ಚಂದ್ರ, ಶ್ರೀರಾಮಚಂದ್ರನೇ ಮುಂತಾದ ಪ್ರಸಿದ್ಧ ರಾಜ–ಮಹಾರಾಜರು ಈ ನೆಲವನ್ನು ಆಳಿದ್ದಾರೆ, ಅವರಿಗೆ ಕೊನೆಗೆ ಒಂದು ಹಿಡಿ ಮಣ್ಣನ್ನಾದರೂ ಕೊಂಡು ಹೋಗಲು ಸಾಧ್ಯವಾಯಿತೇ? •

## 23. ದೇವರಲ್ಲಿ ಭಕ್ತನ ಬೇಡಿಕೆ :

ಒಂದಾನೊಂದು ಊರಿನಲ್ಲಿ ಒಬ್ಬ ದೇವರ ಭಕ್ತನಿದ್ದನು. ಇವನಿಗೆ ಭಗವಂತನನ್ನು ಕಾಣುವ ಆಸೆ. ಹಿರಣ್ಯಕಶಿಪು ದೇವರಿಲ್ಲವೆಂದು ಲೋಕವನ್ನೆಲ್ಲಾ ಹುಡುಕಿದರೂ ದೇವರು ಎಲ್ಲೂ ಕಾಣಲಿಲ್ಲ ದೇವರಿದ್ದಾನೆ ಎಂದು ನಂಬಿದ ಪ್ರಹ್ಲಾದನಿಗೆ ಕಂಬದಲ್ಲಿ ಕೂಡಾ ದೇವರು ಕಾಣಿಸಿದ. ಒಂದು ದಿವಸ ಭಕ್ತ ತಿಮ್ಮಪ್ಪ ದೇವಸ್ಥಾನಕ್ಕೆ ಬಂದು ಭಗವಂತಾ ನಾನು ಸ್ವಲ್ಪ ಕಷ್ಟದಲ್ಲಿದ್ದೇನೆ,ನನಗೆ ಲಾಟರಿಯಲ್ಲಿ ಒಂದು ಲಕ್ಷ ರೂಪ್ಯಾ ಕೊಡಿಸು, ಅದರಲ್ಲಿ 50 ಸಾವಿರ ರೂಪ್ಯಾಯನ್ನು ನಿನ್ನ ಹುಂಡಿಗೆ ಹಾಕುತ್ತೇನೆ ಎಂದು ದೇವರಲ್ಲಿ ಪ್ರಾರ್ಥಿಸಿ ಹೋದನು. 15 ದಿವಸದ ನಂತರ ಭಕ್ತನಿಗೆ ಲಾಟರಿಯಲ್ಲಿ 50 ಸಾವಿರ ರೂಪ್ಯಾ ಬಂತು ಇದರಲ್ಲಿ ಅರ್ಧಭಾಗ ಅಂದರೆ 25,000 ರೂಪ್ಯಾ ದೇವರ ಹುಂಡಿಗೆ ಹಾಕಬೇಕು ಎಂಬುದಾಗಿ ದೇವಸ್ಥಾನಕ್ಕೆ ಬಂದು ದೇವರಿಗೆ ಕೈ ಮುಗಿದ. ಭಕ್ತನ ಕೈ ಕಾಲು ನಡುಗುತ್ತಿತ್ತು. ಯಾಕೆಂದರೆ 50 ಸಾವಿರದಲ್ಲಿ 25 ಸಾವಿರ ರೂಪ್ಯಾ ದೇವರ ಹುಂಡಿಗೆ ಹಾಕಬೇಕಲ್ಲಾ ಎಂದು, ಮಕ್ಕಳಿಗೆ ಬಟ್ಟೆಬರೆ, ಶಾಲೆ ಖರ್ಚು ತುಂಬಾ ಇದೆ, ಏನು ಮಾಡುವುದು ಎಂದು ಆಲೋಚಿಸುತ್ತಿರುವಾಗ ಭಕ್ತನಿಗೆ ಒಂದು ಉಪಾಯ ಹೊಳೆಯಿತು. ನಾನು ದೇವರಲ್ಲಿ ಕೇಳಿದ್ದು ಒಂದು ಲಕ್ಷ ರೂಪ್ಯಾ ಲಾಟರಿಯಲ್ಲಿ ಬಂದದ್ದು 50 ಸಾವಿರ ರೂಪ್ಯಾ ಭಗವಂತ ಬುದ್ಧಿವಂತ, ತನಗೆ ಸಲ್ಲಬೇಕಾದ 50 ಸಾವಿರ ರೂಪ್ಯಾಯನ್ನು ಇಟ್ಟುಕೊಂಡೆ ಉಳಿದ 50 ಸಾವಿರರೂಪ್ಯಾ ಯನ್ನು ನನಗೆ ಕಳುಹಿಸಿರುತ್ತಾನೆ. ಭಕ್ತ ನಗುತ್ತಾ ದೇವರನ್ನು ಹೊಗಳುತ್ತಾ ಭಗವಂತನ ಹುಂಡಿಗೆ ಕಾಣಿಕೆಯನ್ನು ಹಾಕದೆ ಹೊರಟು ಹೋದನು. •

## 24. ತಂದೆಯ ಶವಕ್ಕೆ ಮಕ್ಕಳು ಹಣದ ಗಂಟು ಇಡುವುದು.

ಒಂದಾನೊಂದು ಊರಿನಲ್ಲಿ ಇಬ್ಬರು ಗಂಡ–ಹೆಂಡತಿಯರು ವಾಸ ಮಾಡಿಕೊಂಡಿದ್ದು ಅನ್ಯೋನ್ಯವಾಗಿದ್ದರು. ಇವರಿಗೆ 3 ಜನ ಗಂಡು ಮಕ್ಕಳು. ಈ ತಂದೆ ತಾಯಿಗಳು ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಿ ಪ್ರಾಯಕ್ಕೆ ಬಂದ ಮೇಲೆ ಮದುವೆ ಮಾಡಿಸಿದರು. ಇಬ್ಬರು ಗಂಡು ಮಕ್ಕಳು ಮನೆಯಲ್ಲಿ ಕೃಷಿ ಕೆಲಸ ಮಾಡಿಕೊಂಡಿದ್ದು 3ನೇ ಮಗ ಸೌದಿಯಲ್ಲಿ ಉದ್ಯೋಗದಲ್ಲಿದ್ದ. ತಂದೆಗೆ ಪ್ರಾಯವಾಗುತ್ತಾ ಬಂತು. 3 ಜನ ಗಂಡು ಮಕ್ಕಳನ್ನು ಕರೆಸಿ ಹೀಗೆ ಹೇಳಿದ. ನಮ್ಮ ಪದ್ಧತಿ ಪ್ರಕಾರ ನಾನು ಸತ್ತ ಮೇಲೆ 6 ಅಡಿ ಉದ್ದದ ಹೊಂಡವನ್ನು ತೆಗೆದು ಸ್ನಾನ ಮಾಡಿಸಿ, ಅಲಂಕಾರ ಮಾಡಿ, ಹೊಂಡದಲ್ಲಿ ನನ್ನನ್ನು ಕೂರಿಸಿ, ನನ್ನ ಕೈಯಲ್ಲಿ ಒಬ್ಬೊಬ್ಬರು 10,000/– ರೂಪ್ಯಾ ನೋಟಿನ ಕಟ್ಟನ್ನು ಇಟ್ಟು ಪೂಜೆ ಮಾಡಿ ನಂತ್ರ ಮಣ್ಣು ಮುಚ್ಚಬೇಕು ಎಂಬುದಾಗಿ ಮಕ್ಕಳಲ್ಲಿ ತಿಳಿಸಿದರು. ತಂದೆಯವರು ಹೇಳಿದ ಎರಡೇ ತಿಂಗಳಲ್ಲಿ ಮೃತಪಟ್ಟರು. ಮನೆಯಲ್ಲಿ ಇಬ್ಬರು ಗಂಡು ಮಕ್ಕಳು ತಂದೆಯ ಕ್ರಿಯೆಯನ್ನು ಮಾಡಿಸಿ ಹೊಂಡದಲ್ಲಿ ಕೂರಿಸಿ ಹತ್ತು+ಹತ್ತು ಸಾವಿರದ ಎರಡು ನೋಟಿನ ಕಟ್ಟುಗಳನ್ನು ತಂದೆಯ ಕೈಯಲ್ಲಿ ಇಟ್ಟರು. 3ನೇ ಮಗ ಸೌದಿಯಿಂದ ಬರುವಾಗ ತಡವಾಗಿತ್ತು. ಅದೂ ಅಲ್ಲದೇ ಶನಿವಾರ, ಭಾನುವಾರ ರಜೆ ಆಗಿತ್ತು. 3ನೇ ಮಗನಿಗೆ 10,000/–ರೂಪ್ಯಾ ನಗದು ಸಿಗಲಿಲ್ಲ. ಆತ ಒಂದು ಉಪಾಯ ಮಾಡಿದ. ಹತ್ತು ಸಾವಿರದ ಬದಲು ಚೆಕ್ ಕೊಡುವುದಾಗಿ ಹೇಳಿ, ಖಾಲಿ ಚೆಕ್‌ನ್ನು ತಂದೆಯ ಕೈಯಲ್ಲಿ ಇಟ್ಟು, ಚೆಕ್‌ನಲ್ಲಿ 30,000/–ರೂಪ್ಯಾ ಬರೆದಿರುವುದಾಗಿ ಹೇಳಿ, ತಂದೆಯ ಕೈಯಲ್ಲಿದ್ದ 10,000/– 2 ಕಟ್‌ನ್ನು ಎತ್ತಿಕೊಂಡು ಹೋದನು. ಹಿರಿಯ ಇಬ್ಬರು ಮಕ್ಕಳು ತಂದೆಯ ಋಣವನ್ನು ತೀರಿಸಿದರೆ, ಕಿರಿಯ ಮಗ ತಂದೆಯ ಋಣದಲ್ಲಿ ಬೀಳುತ್ತಾನೆ ಅಲ್ಲದೇ ಕಷ್ಟ–ನಷ್ಟಗಳಿಗೆ ತುತ್ತಾಗುತ್ತಾನೆ. •

## 25. ಈಶ್ವರನಿಗೆ ವಿಷ್ಣುವಿನ ಸಂದೇಶ

ಒಂದು ಬಾರಿ ವಿಷ್ಣು ಗರುಡನ ಮೂಲಕ ಈಶ್ವರನಿಗೆ ಏನೋ ಒಂದು ಸಂದೇಶ ಕಳುಹಿಸಿದ. ಗರುಡ ತನ್ನ ರೆಕ್ಕೆಗಳನ್ನು ಬಡಿಯುತ್ತಾ ಈಶ್ವರನ ಸಮೀಪಕ್ಕೆ ಬಂದನು.ರೆಕ್ಕೆಗಳ ಬಡಿತದಿಂದ ಉಂಟಾದ ಗಾಳಿ ಶಿವನ ಕುತ್ತಿಗೆಯಲ್ಲಿದ್ದ ಹಾವಿಗೆ ತಾಗಿತು. ಆಗ ಆ ಸರ್ಪ ಈಶ್ವರನ ಕೊರಳಿನಲ್ಲಿರುವ ನನ್ನನ್ನೇ ಈ ಗರುಡ

ಬೆದರಿಸುತ್ತಿದೆಯಲ್ಲಾ. ಎಂದು ಕೋಪಗೊಂಡು ಬುಸುಗುಟ್ಟಿ ತೊಡಗಿತು. ಆಗ ಗರುಡ ಎಲೈ ಸರ್ಪರಾಜ ನೀನು ಈಶ್ವರನ ಕುತ್ತಿಗೆಯನ್ನು ಅಲಂಕರಿಸಿರುವ ಕಾರಣ ನಾನು ನಿನ್ನನ್ನು ಬಿಟ್ಟು ಬಿಟ್ಟಿದ್ದೇನೆ. ಈಶ್ವರನನ್ನು ಬಿಟ್ಟು ನೀನು ಈ ಕಡೆಗೆ ಬಾ, ನಿನ್ನನ್ನು ಎತ್ತಿಕೊಂಡು ಹೋಗುತ್ತೇನೆ ಎಂದು ಹೇಳಿತು. ಈಶ್ವರನ ಕೊರಳನ್ನು ಬಿಟ್ಟರೆ ಹಾವು ಗರುಡನಿಗೆ ಆಹಾರವಾಗಿ ಪರಿಣಮಿಸುತ್ತದೆ. ಆದರೆ ಅದು ಆ ಸ್ಥಾನದಲ್ಲಿ ಇದ್ದ ಕಾರಣ ಅದಕ್ಕೆ ಇಂತಹ ದೊಡ್ಡತನ ಬಂತು. •

## 26. ಶ್ರೀಮಂತನ ಭವ್ಯವಾದ ಸೌಧ

ಒಂದೂರಿನಲ್ಲಿ ಒಬ್ಬ ಬಹಳ ದೊಡ್ಡ ಶ್ರೀಮಂತನಿದ್ದ. ಯಾರೂ ನೋಡಿರದಂತಹ, ಕೇಳಿರದಂತಹ ಕನಸು ಕೂಡಾ ಕಾಣದಂತಹ ಭವ್ಯವಾದ ಸೌಧವನ್ನು ಕಟ್ಟಿಸಬೇಕೆಂದುಆತ ಯೋಚಿಸಿದ. ದೇಶ–ವಿದೇಶಗಳಿಂದ ಪ್ರಸಿದ್ಧರಾದ ವಾಸ್ತುಶಿಲ್ಪ ತಜ್ಞರನ್ನು ಪರಿಣತರನ್ನು ಕರೆಸಿದ. ನೀರಿನಂತೆ ಹಣವನ್ನು ಚೆಲ್ಲಿದ. ಸಾವಿರಾರು ಮಂದಿ ಕೆಲಸಗಾರರು ಹಗಲಿರುಳು ನಿರ್ಮಾಣ ಕಾರ್ಯದಲ್ಲಿ ಪಾಲ್ಗೊಂಡರು. ಕೊನೆಗೆ ಭವ್ಯವಾದ ಭವನದ ನಿರ್ಮಾಣವಾಯಿತು ಈ ಭವನವನ್ನು ನೋಡಿ ಜನ ಬೆಕ್ಕಸ ಬೆರಗಾಗುತ್ತಿದ್ದರು. ಈ ಸೌಧದ ಪ್ರವೇಶೋತ್ಸವವನ್ನು ವಿಜೃಂಭಣೆಯಿಂದ ನೆರವೇರಿಸಬೇಕೆಂದು ಶ್ರೀಮಂತ ನಿರ್ಧರಿಸಿದ. ಸಾವಿರಾರು ಮಂದಿಗೆ ಆಮಂತ್ರಣವನ್ನು ಕಳುಹಿಸಿದ ಈ ಶುಭ ಸಂದರ್ಭದಲ್ಲಿ ತನ್ನನ್ನು ಆಶೀರ್ವದಿಸಲು ಬರಬೇಕೆಂದು ಅನೇಕ ಸಾಧು ಸಂತರನ್ನೂ, ಯೋಗಿಗಳನ್ನು ವಿನಂತಿಸಿದ. ಪ್ರವೇಶೋತ್ಸವದ ದಿನ ಅಧಿಕ ಸಂಖ್ಯೆಯಲ್ಲಿ ಜನರು ಬಂದರು. ಸಾಧು, ಸಂತರು, ಯೋಗಿಗಳು ಆಗಮಿಸಿದರು. ಬಂದಂತಹ ವ್ಯಕ್ತಿಗಳಲ್ಲಿ ಈ ಸೌಧದಲ್ಲಿ ಏನಾದರೂ ಕೊರತೆಗಳು ಕಂಡು ಬಂದರೆ ದಯವಿಟ್ಟು ನನಗೆ ತಿಳಿಸಿ. ನಾನು ಅವುಗಳನ್ನು ಸರಿಪಡಿಸುತ್ತೇನೆ. ಎಂದು ಈ ಶ್ರೀಮಂತ ಕೇಳುತ್ತಿದ್ದ, ಇಂತಹ ಭವ್ಯ ಮಂದಿರದಲ್ಲಿ ಕೊರತೆಯೇ ಇರಲು ಸಾಧ್ಯವೇ ಇಲ್ಲ ಎಂದು ಬಂದವರೆಲ್ಲಾ ಅಭಿಪ್ರಾಯ ಪಟ್ಟರು.

ಕೊನೆಗೆ ಒಬ್ಬ ಯೋಗಿ ಆತನಲ್ಲಿ ಈ ಭವನದಲ್ಲಿ ಎರಡು ಕೊರತೆಗಳಿವೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ. ಇದನ್ನು ಕೇಳಿದ ಜನರೆಲ್ಲಾ ಆಶ್ಚರ್ಯ ಚಕಿತರಾದರು. ಆ ಶ್ರೀಮಂತ ಸ್ವಾಮಿ ದಯವಿಟ್ಟು ಕೊರತೆಗಳು ಏನೆಂದು ಹೇಳಿ ಸರಿಪಡಿಸಲು ಪ್ರಯತ್ನಿಸುತ್ತೇನೆ ಎಂದು ವಿನಂತಿಸಿದ. ಆಗ ಆ ಯೋಗಿ "ಮೊದಲನೆಯದಾಗಿ ಈ ಭವನ ಈಗ ಎಷ್ಟೇ ಭವ್ಯವಾಗಿದ್ದರೂ ಕಾಲಾಂತರದಲ್ಲಿ ಶಿಥಿಲವಾಗುತ್ತದೆ.

ಯಾರಿಂದಲೂ ಇದನ್ನು ತಪ್ಪಿಸಲೂ ಸಾಧ್ಯವಾಗದು". ಎರಡನೇಯದಾಗಿ "ಈ ಭವನವನ್ನು ಕಟ್ಟಿಸಿದವನು ಆತ ಎಂತಹ ಧನವಂತನಾದರೂ ಮರಣ ಹೊಂದಲೇಬೇಕು." ಇದನ್ನು ಯಾರಿಂದಲೂ ತಪ್ಪಿಸಲೂ ಸಾಧ್ಯವಿಲ್ಲ. ಈ ಸತ್ಯವನ್ನುನೀನು ಅರಿತುಕೊಳ್ಳದೆ ಬಹಳ ದೊಡ್ಡ ವ್ಯಕ್ತಿಯೆಂದು ಭ್ರಮೆಯಲ್ಲಿದ್ದೀಯಾ. ಮೃತ್ಯುವನ್ನು ಮರೆತು ಭೋಗ-ಭಾಗ್ಯಗಳೇ ಸ್ಥಿರ ಎಂದು ತಿಳಿಯುವವರ ಸ್ಥಿತಿಯೇ ಹೀಗೆ. ಆತ್ಮ ಸಾಧನವೇ ಅತ್ಯಂತ ಸುಂದರವಾದ ಸೌಧ. ಇದನ್ನು ಮೀರಿಸುವ ಸಾಧಕರೇ ಪ್ರಪಂಚದಲ್ಲಿಲ್ಲ ಎಂದು ಹೇಳಿದ. •

## 27. ಘೋರಿ ಮಹಮ್ಮದ್ ಮತ್ತು ಪ್ರಥ್ವೀರಾಜ

ಘೋರಿ ಮಹಮ್ಮದ್ ಹದಿನೇಳು ಬಾರಿ ಭಾರತಕ್ಕೆ ದಂಡೆತ್ತಿ ಬಂದು, ಭಾರತದ ಅಮೂಲ್ಯವಾದ ಆಸ್ತಿ-ಪಾಸ್ತಿಗಳನ್ನು ನಾಶ ಮಾಡಿ ಸಿರಿ-ಸಂಪತ್ತನ್ನು ದೋಚಿಕೊಂಡು ಹೋದ. ಪ್ರಥ್ವೀರಾಜನನ್ನು ಅನೇಕ ಕಷ್ಟ-ನಷ್ಟಗಳಿಗೆ ಗುರಿಪಡಿಸಿದ. 16 ಬಾರಿ ಪ್ರಥ್ವೀರಾಜಅವನನ್ನು ಸೋಲಿಸಿ, ಸೆರೆಹಿಡಿದ ಅವನಿಗೆ ಯಾವುದೇ ತೊಂದರೆ ಕೊಡದೆ ಔದಾರ್ಯದಿಂದ ಕಳುಹಿಸಿದ. ಆದರೆ ಅದೇ ಘೋರಿ ಮಹಮ್ಮದ್ 17ನೇ ಬಾರಿ ಮತ್ತೆ ಪ್ರಥ್ವೀರಾಜನ ಮೇಲೆ ದಾಳಿ ಮಾಡಿ ಮೋಸದಿಂದ ಅವನನ್ನು ಸೋಲಿಸಿದ. ಕೃತಜ್ಞತೆಯ ಲವಲೇಶವೂ ಇಲ್ಲದೇ ಆತ ಪ್ರಥ್ವೀರಾಜನ ಕಣ್ಣುಗಳನ್ನು ಕೀಳಿಸಿದ. ಇಂತಹ ಪಾಶವೀ ಸ್ವಭಾವದವರಿಗೆ, ಕೃತಘ್ನರಿಗೆ ನಾವು ಕ್ಷಮೆಯನ್ನು ತೋರಬಾರದು. •

## 28. ಮನಸ್ಸಿದ್ದರೆ ಮಾರ್ಗವಿದೆ (ಪ್ರಯೋಗ)

ಪ್ರಯೋಗವನ್ನು ವೀಕ್ಷಿಸಲು ಗುರುಗಳ ಸುತ್ತಲೂ ಶಿಷ್ಯರು ನೆರೆದಿದ್ದರು. ಗುರುಗಳು ಮೇಜಿನ ಮೇಲೆ ಅಗಲ ಬಾಯಿಯ ಗಾಜಿನ ಪಾತ್ರೆಯ ಬಾಯಿಯವರೆಗೂ ಜಲ್ಲಿಕಲ್ಲುಗಳನ್ನು ತುಂಬಿಸಿದರು. ನಂತ್ರ ಕೇಳಿದರು ಈಗ ಪಾತ್ರೆಯಲ್ಲಿ ಜಾಗ ಖಾಲಿ ಇದೆಯಾ. ಇಲ್ಲಾ ಎಂದರು ವಿದ್ಯಾರ್ಥಿಗಳು. ಆಗ ಗುರುಗಳು ಜಲ್ಲಿ ತುಂಬಿದ್ದ ಆ ಪಾತ್ರೆಗೆ ನಿಧಾನವಾಗಿ ಮರಳನ್ನು ಸುರಿದರು, ಜೆಲ್ಲಿ ಕಲ್ಲುಗಳ ನಡುವಣ ಜಾಗದಲೆಲ್ಲಾ ಇಳಿದು ಮರಳು ತುಂಬಿಕೊಂಡಿತು.

ಗುರುಗಳು ಪುನಃ ಪ್ರಶ್ನಿಸಿದರು. ಈಗ ಈ ಪಾತ್ರೆಯಲ್ಲಿ ಇನ್ನೇನನ್ನಾದರೂ ತುಂಬಲು ಸಾಧ್ಯವೇ? ಸಾಧ್ಯವಿಲ್ಲ, ಈಗಾಗಲೇ ಹೌಸ್ಫುಲ್ ಆಗಿದೆ, ಎಂದರು ವಿದ್ಯಾರ್ಥಿಗಳು. ಗುರುಗಳು ನಗುತ್ತಾ ಒಂದು ಸೀಸೆಯಿಂದ ನೀರನ್ನು ಆ ಪಾತ್ರೆಗೆ ಸುರಿದರು. ನೀರು ಇಂಗುತ್ತಾ ಜೆಲ್ಲಿ ಮತ್ತು ಮರಳುಗಳ ಮಧ್ಯೆ ತುಂಬಿಕೊಂಡಿತು. ಗುರುಗಳು ಮತ್ತೊಮ್ಮೆ ವಿದ್ಯಾರ್ಥಿಗಳನ್ನು ಕೇಳಿಕೊಂಡರು ಈ ಪಾತ್ರೆಗೆ ಇನ್ನೇನಾದರೂ ಹಾಕಬಹುದೇ? ವಿದ್ಯಾಥಿಗಳೆಲ್ಲಾ ಏಕಕಂಠದಿಂದ ಖಂಡಿತಾ ಸಾಧ್ಯವಿಲ್ಲ ಅಲ್ಲಿ ಜಾಗವೇ ಇಲ್ಲಾ ಅಂದರು, ಗುರುಗಳು ಒಂದು ಪೊಟ್ಟಣದಿಂದ ಸಕ್ಕರೆಯನ್ನು ತೆಗೆದುಕೊಂಡು ಆ ಪಾತ್ರೆಯ ಮೇಲೆಲ್ಲಾ ಚುಮುಕಿಸಿದರು. ಸಕ್ಕರೆ ನೀರಿನ ಪಸೆಯೊಂದಿಗೆ ಕರಗಿಹೋಯಿತು. ಹಾಗೆ ಮನಸಿದ್ದರೆ ಯಾವ ಕೆಲಸದ ಮಧ್ಯೆಯೂ ಭಗವಧ್ಯಾನ ಮಾಡಬಹುದು. •

## 29. ಶಿಷ್ಯನಿಗೆ ಗುರುಗಳ ಉಪದೇಶ

ಆಗ ತಾನೆ ಗುರುಕುಲಾಶ್ರಮಕ್ಕೆ ಬಂದಿದ್ದ ಹುಡುಗನೊಬ್ಬ ಗುರುಕುಲದಲ್ಲಿ ಒಂದು ದಿವಸ ವಿದ್ಯಾಭ್ಯಾಸ ಮಾಡುತ್ತಿರುವಾಗ ಗುರುಗಳು ಮಕ್ಕಳೆಲ್ಲರಿಗೂ ಭಗವಂತನು ಎಲ್ಲಾ ಕಡೆಯೂ ಇದ್ದಾನೆ. ಸರ್ವರಲ್ಲಿಯೂ ಇದ್ದಾನೆ ಎಂದು ಉಪದೇಶಿಸಿದರು. ಒಂದು ದಿನ ಹುಡುಗ ಶಾಲೆಯನ್ನು ಬಿಟ್ಟು ಮಧ್ಯಾಹ್ನ ರಾಜ ಬೀದಿಯಲ್ಲಿ ನಡೆದುಕೊಂಡು ಬರುತ್ತಿದ್ದ. ಇವನ ಹಿಂದೆ ಆನೆಯೊಂದು ಬರುತ್ತಿತ್ತು. ಮಾವುತ ಹೇಳಿದ ಆನೆಗೆ ಸಿಟ್ಟು ಬಂದಿದೆ. ದಾರಿ ಬಿಡಿ ಎಂಬುದಾಗಿ. ಆ ಹುಡುಗ ತನ್ನೊಳಗೆ ಆಲೋಚಿಸಿ ದೇವರು ಎಲ್ಲಾ ಕಡೆ ಇದ್ದಾನೆ, ಆನೆಯಲ್ಲಿಯೂ ಇದ್ದಾರೆ, ನಾನೇಕೆ ಬದಿಗೆ ಹೋಗಬೇಕು ಎಂಬುದಾಗಿ ಹೇಳಿ ನೆಟ್ಟಗೆ ನಡೆದುಕೊಂಡು ಹೋಗುತ್ತಿದ್ದನು. ಆನೆಗೆ ಸಿಟ್ಟು ಬಂತು, ಬಂದು ಹುಡುಗನನ್ನು ಮೇಲಕ್ಕೆ ಎತ್ತಿ ಹಾಕಿ ಮುಂದಕ್ಕೆ ಹೋಯಿತು, ಹುಡುಗನಿಗೆ ಸಿಟ್ಟು ಬಂತು ಹೋಗಿ ಗುರುಗಳಲ್ಲಿ ಹೇಳಿದನು. ನನ್ನಲ್ಲಿಯೂ ದೇವರಿದ್ದಾನೆ, ಆನೆಯಲ್ಲಿಯೂ ಇದ್ದಾನೆ ಆದರೆ ನನ್ನನ್ನೇಕೆ ಎತ್ತಿ ಹಾಕಿತು ಎಂದು ಗುರುಗಳಲ್ಲಿ ಕೇಳಿದನು. ಆ ಮಾವುತನಲ್ಲಿಯೂ ದೇವರಿದ್ದಾನೆ. ಮಾವುತ ಹೇಳಿದ ಮಾತನ್ನು ನೀನು ಕೇಳಲಿಲ್ಲ ಎಂದರು. ಹುಡುಗನಿಗೆ ತನ್ನ ತಪ್ಪಿನ ಬಗ್ಗೆ ಅರಿವಾಗಿ ಪಶ್ಚಾತ್ತಾಪ ಪಟ್ಟನು. •

## 30.ಪರ್ವತಗಳಿಗೂ ರೆಕ್ಕೆ

ಮೈನಾಕನ ಪುತ್ರನೇ ಮಹಾಮಹಿಮನಾದ ಕ್ರೌಂಚಪರ್ವತ. ಸಪ್ತದ್ವೀಪಗಳಲ್ಲಿ ಒಂದರಲ್ಲಿ ಕ್ರೌಂಚಪರ್ವತವು ಇರುವುದರಿಂದ ಈ ಪರ್ವತಕ್ಕೆ ಕ್ರೌಂಚ ದ್ವೀಪ ಎಂಬ ಹೆಸರಾಗಿದೆ ಪೂರ್ವದಲ್ಲಿ ಪರ್ವತಗಳಿಗೆ ರೆಕ್ಕೆಯಿದ್ದು ಅವು ಎಲ್ಲಿಗೆ ಅಂದರೆ ಅಲ್ಲಿಗೆ ಹೋಗುತ್ತಿದ್ದವು .ಇದರಿಂದ ಋಷಿಗಳಿಗೆ ಮತ್ತು ಮನುಷ್ಯರಿಗೆ ಬಹಳ ತೊಂದರೆಗಳಾಗುತ್ತಿದ್ದು ಆಗ ಋಷಿಗಳ ಕೋರಿಕೆಯಂತೆ ಇಂದ್ರನು ವಜ್ರಾಯುಧದಿಂದ ಪರ್ವತಗಳ ರೆಕ್ಕೆಗಳನ್ನು ಕತ್ತರಿಸಿ ಅವು ಚಲಿಸದಂತೆ ಮಾಡಿದನು. ಆದರೆ ಮೈನಾಕನು ವಾಯುದೇವನ ಸಹಾಯದಿಂದ ಸಮುದ್ರಕ್ಕೆ ಹೋಗಿ ಅಲ್ಲಿ ಅಡಗಿಕೊಂಡನು. ಮುಂದೆ ತ್ರೇತಾಯುಗದಲ್ಲಿ ಹನುಮಂತನು ಸಮುದ್ರೋಲಂಘನ ಮಾಡಿದಾಗ ಮೈನಾಕನು ಸಮುದ್ರ ಮಧ್ಯದಿಂದ ಎದ್ದು ಬಂದು ನನ್ನ ಮೇಲೆ ಕುಳಿತು ವಿಶ್ರಾಂತಿ ಪಡೆದುಹೋಗು ಎಂದು ಹನುಮಂತನನ್ನು ಪ್ರಾರ್ಥಿಸಿದನು. ಆದರೆ ಹನುಮಂತನು ತನ್ನ ಪ್ರಯಾಣವನ್ನು ಮುಂದುವರಿಸಿದನು.

•

## 31. ಇಂದ್ರನು ಬ್ರಹ್ಮಹತ್ಯಾ ದೋಷ ಹಂಚಿದ್ದು :

ವಿಶ್ವರೂಪನಿಗೆ ತ್ರಿಶಿರಂ ಎಂಬ ನಾಮಕರಣವಿತ್ತು. ಅಂದರೆ ಮೂರು ತಲೆಯುಳ್ಳವನೆಂದರ್ಥ. ಈತನು ರಾಕ್ಷಸ ಪಕ್ಷಪಾತಿಯಾಗಿ ಒಂದು ಮುಖದಿಂದ ರಾಕ್ಷಸರಿಗೂ ಕೂಡಾ ಹವಿರ್ಭಾಗವನ್ನು ತೆಗೆದುಕೊಂಡು ಹೋಗಿ ಕೊಡುತ್ತಲಿದ್ದನು.ಈ ವಿಷಯವನ್ನು ಇಂದ್ರನು ಅರಿತು ತನ್ನ ವಜ್ರಾಯುಧದಿಂದ ಆತನ ತಲೆಯನ್ನು ಕಡಿದನು. ಒಂದು ತಲೆಯು ತಿತ್ತಿರಿ ಪಕ್ಷಿಯಾಯಿತು. ಇನ್ನೊಂದು ತಲೆಯು ಕಪಿಂಜರ ಪಕ್ಷಿಯಾಯಿತು. ಮತ್ತೊಂದು ತಲೆಯು ಕರಪಾಕ ಪಕ್ಷಿಯಾಯಿತು. ಇದರಿಂದ ಇಂದ್ರನಿಗೆ ಬ್ರಹ್ಮಹತ್ಯಾ ದೋಷ ಪ್ರಾಪ್ತವಾಯಿತು. ಆಗ ಇಂದ್ರನು  ಬ್ರಹ್ಮಹತ್ಯಾ ದೋಷವನ್ನು ಸ್ವೀಕರಿಸಿ ನನ್ನನ್ನು ಪುನೀತನಾಗಿ ಮಾಡಿರೆಂದು ಬೇಡಿದಾಗ ದೇವತೆಗಳು ಇದನ್ನು ನಾಲ್ಕು ಭಾಗ ಮಾಡಿ ಭೂಲೋಕದಲ್ಲಿ ಹಂಚಿ ಬಿಡು ಅಂದರು. ಅದನ್ನು ಯುಕ್ತವೆಂದು ಒಪ್ಪಿ ಒಂದು ಭಾಗವನ್ನು ಭೂಮಿಯು ಸ್ವೀಕರಿಸುವಂತೆ ಬೇಡಿಕೊಂಡನು, ಭೂದೇವಿಯು ಒಪ್ಪಿ ಸ್ವೀಕರಿಸಿಕೊಂಡಳು. ಅದೇ ಚೌಳು ಮಣ್ಣು ಅದನ್ನು ಮುಟ್ಟಬಾರದು. ಅದು ಬ್ರಹ್ಮಹತ್ಯಾ ದೋಷ.

ನೀರನ್ನು ಕುರಿತು ನೀನೊಂದು ಭಾಗವನ್ನು ವಹಿಸಿಕೊಳ್ಳಬೇಕೆಂದು ಬೇಡಿದನು. ಅದು ಹಾಗೆಯೇ ಆಗಲೆಂದು ಒಪ್ಪಿದುದರಿಂದ ನೀರಿನಲ್ಲಿ ನೊರೆಯಾಗಿರುವುದೇ ಬ್ರಹ್ಮಹತ್ಯಾ ದೋಷವು ಅಂಥಾ ನೀರಿನಲ್ಲಿ ಸ್ನಾನ ಮಾಡಬಾರದು.

ಇನ್ನೊಂದು ಭಾಗವನ್ನು ವೃಕ್ಷಗಳು ತೆಗೆದುಕೊಳ್ಳುವಂತೆ ಬೇಡಿದನು. ವೃಕ್ಷಗಳು ಒಪ್ಪಿ ತೆಗೆದುಕೊಂಡದ್ದರಿಂದ ಅದರಲ್ಲಿ ದ್ರವರೂಪವಾಗಿ ಹರಿದು ಗೊಂದಾಗುತ್ತದೆ, ಆ ಗೋಂದೇ ಬ್ರಹ್ಮಹತ್ಯಾ ದೋಷವು. ಆ ಗೋಂದನ್ನು ದೊಡ್ಡವರು ಮುಟ್ಟುವುದಿಲ್ಲ.

ಮತ್ತೊಂದು ಭಾಗವನ್ನು ಹೆಂಗಸರು ಸ್ವೀಕರಿಸಿಕೊಳ್ಳಿರೆಂದು ಪ್ರಾರ್ಥಿಸಿದನು, ಅವರು ಅನುಮೋದಿಸಿ ಸ್ವೀಕರಿಸಿದರು. ಹೆಂಗಸರು ರಜಸ್ವಾಲೆಯಾಗುವುದೇ ಬ್ರಹ್ಮಹತ್ಯಾ ದೋಷ. ಆ ಕಾಲದಲ್ಲಿ ಹೆಂಗಸರ ಸ್ಪರ್ಶ ಹಾಗೂ ಸಂಭಾಷಣೆ ನಿಷಿದ್ಧ. ಇದರಿಂದ ತೊಂದರೆಗೊಳಗಾದ ಭೂಮಿ,ನೀರು, ವೃಕ್ಷ ಮತ್ತು ಹೆಂಗಸರಿಗೆ ತೊಂದರೆಯಾಗದ ಹಾಗೆ ಪರಿಹಾರವನ್ನು ಸೂಚಿಸಿ ವರವನ್ನು ನೀಡಿದ್ದಾನೆ ಇಂದ್ರದೇವ.

•

## 32. ಕಪೋತ ಪಕ್ಷಿಗಳ ಕಥೆ

ಒಂದಾನೊಂದು ಕಾಡಿನಲ್ಲಿ ಒಂದು ಪಾರಿವಾಳ ಪಕ್ಷಿಯು ದೊಡ್ಡ ಮರದಲ್ಲಿ ಒಂದು ಗೂಡು ಕಟ್ಟಿಕೊಂಡು ತನ್ನ ಹೆಂಡತಿಯಾದ ಹೆಣ್ಣು ಪಾರಿವಾಳ ಪಕ್ಷಿಯೊಡನೆ ಬಹುಕಾಲದಿಂದ ವಾಸ ಮಾಡುತ್ತಿತ್ತು. ಈ ಕಪೋತ ಪಕ್ಷಿಗಳು ಪರಸ್ಪರ ಪ್ರೇಮದಿಂದ ಕಾಡಿನಲ್ಲಿ ಸಂಚರಿಸುತ್ತಾ ಮಧುರವಾದ ಫಲಗಳನ್ನು ಭಕ್ಷಿಸುತ್ತಾ ಸುಖ–ಸಲ್ಲಾಪಗಳಿಂದ ಕೂಡಿ ಆನಂದದಿಂದಿದ್ದವು. ಹೆಣ್ಣು ಕಪೋತವು ಯಾವ ಪದಾರ್ಥಗಳನ್ನು ಅಪೇಕ್ಷಿಸಿದರೂ ಗಂಡು ಪಕ್ಷಿಯೂ ಕಷ್ಟದಿಂದಾದರೂ ಅದನ್ನು ಒದಗಿಸಿ ತೃಪ್ತಿ ಪಡಿಸುತ್ತಿತ್ತು. ಕೆಲಕಾಲ ಕಳೆದ ಮೇಲೆ ಹೆಣ್ಣು ಕಪೋತವು ಗರ್ಭಿಣಿಯಾಯಿತು. ಗಂಡು ಪಕ್ಷಿಯ ಸಡಗರ ಕೇಳಬೇಕೆ, ಎಷ್ಟು ಕಷ್ಟವಾದರೂ ವಿಧ–ವಿಧವಾದ ಪದಾರ್ಥಗಳನ್ನು ಗೂಡಿನಲ್ಲಿ ಸೇರಿಸುತ್ತಿತ್ತು. ಸ್ವಲ್ಪ ದಿನಗಳಾದ ಮೇಲೆ ಹೆಣ್ಣು ಕಪೋತವು ಆ ಗೂಡಿನಲ್ಲಿಯೇ ಮೊಟ್ಟೆಗಳನ್ನಿಟ್ಟಿತು. ಕಾಲಕ್ರಮೇಣ ಮೊಟ್ಟೆಗಳು ಒಡೆದು ಮರಿಗಳಾದವು. ಆ ಕಪೋತ ದಂಪತಿಗಳು ತಮ್ಮ ಮರಿಗಳ ಆಟ ಪಾಠಗಳನ್ನು, ಮಧುರವಾದ ಧ್ವನಿಗಳನ್ನು ಕೇಳುತ್ತಾ ಪರಮಾನಂದವನ್ನು ಹೊಂದಿ ಅವುಗಳ ಪೋಷಣೆಯಲ್ಲಿಯೇ ಕಾಲವನ್ನು ಕಳೆಯುತ್ತಿದ್ದವು.

ಒಂದಾನೊಂದು ದಿನ ಆ ಕಪೋತ ದಂಪತಿಗಳೆರಡೂ ಮರಿಗಳಿಗೆ ಆಹಾರವನ್ನು ತರುವುದಕ್ಕಾಗಿ ಬಲುದೂರ ಹೋಗಿ ಬೇಕಾದ ಫಲಗಳನ್ನು ಸಂಪಾದಿಸಿಕೊಂಡು ಹೆಣ್ಣು ಪಕ್ಷಿಯು ಮರಿಗಳನ್ನು ನೋಡುವುದಕ್ಕಾಗಿ ಬೇಗನೆ ಹಿಂತಿರುಗಿ ಬಂದಿತು. ಬಂದು ನೋಡುವಾಗ ಕಪೋತಗಳು ವಾಸವಾಗಿದ್ದ ಮರದ ಕೆಳಗೆ ಒಬ್ಬ ಬೇಡನು ಬಲೆಯನ್ನು ಬೀಸಿದ್ದನು. ಗೂಡಿನಲ್ಲಿ ಮರಿಗಳನ್ನು ಕಾಣದೇ ವ್ಯಸನದಿಂದ ಬೇಡನು ಬೀಸಿದ ಬಲೆಯಲ್ಲಿ ಮರಿಗಳು ಅರಚುವುದನ್ನು ನೋಡಿ ಪುತ್ರವಾತ್ಸಲ್ಯದಿಂದ ತಾನು ಹೋಗಿ ಬಲೆಯಲ್ಲಿ ಬಿದ್ದಿತು. ಗಂಡು ಕಪೋತವು ಇನ್ನು ಸ್ವಲ್ಪ ಹೊತ್ತಿನ ನಂತರ ಬಂದು ತನ್ನ ಪ್ರೀತಿಯ ಹೆಂಡತಿ ಹಾಗೂ ಮರಿಗಳನ್ನು ಗೂಡಿನಲ್ಲಿ ಕಾಣದೆ ಬೇಡನು ಬೀಸಿದ ಬಲೆಯಲ್ಲಿ ಬಿದ್ದಿರುವುದನ್ನು ನೋಡಿ ಬಹಳವಾಗಿ ದುಃಖ ಪಟ್ಟಿತು. ಸಂಸಾರದಲ್ಲಿ ಸ್ವಲ್ಪವಾದರೂ ತೃಪ್ತಿ ಪಡದೆಯೂ ಸಂಸಾರವೇ ಶಾಶ್ವತವೆಂದು ನಂಬಿ ನನ್ನ ಮನೆ ಹೆಂಡತಿ–ಮಕ್ಕಳು ಎಲ್ಲವನ್ನು ಕಳೆದುಕೊಂಡೆ. ನನ್ನ ಹೆಂಡತಿ ಯಾರು ಇಲ್ಲದ ನನ್ನ ಮನೆಯಲ್ಲಿ ಏಕಾಂಗಿಯಾಗಿ ಬಿಟ್ಟು ಸ್ವರ್ಗಕ್ಕೆ ಹೋಗುತ್ತಿದ್ದಾಳೆ. ಅಯ್ಯೋ ವಿಧಿಯೇ ಹೆಂಡತಿ ಮಕ್ಕಳನ್ನು ಕಳೆದುಕೊಂಡು ಯಾವ ಪ್ರಯೋಜನಕ್ಕಾಗಿ ನಾನು ಬದುಕಬೇಕು, ಹೆಂಡತಿ ಮಕ್ಕಳು ಬಲೆಯಲ್ಲಿ ಬಿದ್ದಿರುವುದನ್ನುನೋಡಿ ಸಂಕಟವನ್ನು ತಾಳಲಾರದೆ ತಾನೂ ಕೂಡಾ ಆ ಬಲೆಯಲ್ಲಿ ಹೋಗಿ ಬಿದ್ದಿತು. ನಂತರ ಸ್ವಪತ್ನಿ–ಪುತ್ರರುಳ್ಳ ಕಪೋತಗಳನ್ನು ಅನಾಯಾಸವಾಗಿ ಸಂಪಾದಿಸಿಕೊಂಡು ಬೇಡನು ತನ್ನ ಮನೆಯನ್ನು ಸೇರಿದನು.

•

## 33. ಕುಮಾರ ನಾಮಕ ವನದ ಕಥೆ

ಉತ್ತರ ದಿಕ್ಕಿನಲ್ಲಿ ಕುಮಾರನಾಮಕ ವನವೊಂದಿತ್ತು. ಅದರಲ್ಲಿ ವಿಹಾರಕ್ಕೆ ಯೋಗ್ಯವಾದ ವನಗಳು, ಸರೋವರಗಳು, ಬೆಟ್ಟಗಳು, ಫಲವೃಕ್ಷಗಳು ಇದ್ದವು. ಅದು ಪಾರ್ವತಿ, ಪರಮೇಶ್ವರರೂ ನಿರ್ವಾಣದಲ್ಲಿ ಜಲಕ್ರೀಡೆಯನ್ನು ಆಡುತ್ತಾ ವಿಹರಿಸುವ ಸ್ಥಳವಾಗಿತ್ತು. ಹೀಗಿದ್ದ ವನಕ್ಕೆ ಈಶ್ವರನ ದರ್ಶನಕ್ಕಾಗಿ ಕೆಲವು ಋಷಿಗಳು ಅವನನ್ನು ಹುಡುಕಿಕೊಂಡು ಕೈಲಾಸವೆಲ್ಲಾ ಸುತ್ತಿ ಈ ವನದಲ್ಲಿರುವುದು ತಿಳಿದು ಈ ವನಕ್ಕೆ ಬಂದರು. ಆಗ ಪಾರ್ವತಿಯು ನಾಚಿಕೊಂಡು ಸೀರೆಯನ್ನುಟ್ಟುಕೊಂಡು ಎಲ್ಲಿ ಹೋದರೂ ಈ ಋಷಿಗಳ ಕಾಟ ನಮಗೆ ತಪ್ಪುವುದಿಲ್ಲ. ಸುಖವಾಗಿ ವನ ವಿಹಾರ ಮಾಡುವುದಕ್ಕೂ ಇಲ್ಲ. ನೀನು ನನ್ನೊಡನೆ ವಿಹರಿಸುತ್ತಿರುವಾಗಲೂ ಈ ಋಷಿಗಳ ಕಾಟವಾದರೆ ನಾನು ನಿನ್ನೊಡನೆ ಸುಖಪಡುವುದು ಯಾವಾಗ ಎಂದು

ಈಶ್ವರನು ಪಾರ್ವತಿಯನ್ನು ಸಂತೋಷ ಪಡಿಸುವುದಕ್ಕಾಗಿ ನಾನು ನೀನು ಇರುವಾಗ ಮತ್ತ್ಯಾರು ಗಂಡಸರು ಪ್ರವೇಶಿಸಿಸಿದಾಗ್ಯೂ ಅವರೆಲ್ಲಾ ಹೆಂಗಸರಾಗಿ ಹೋಗಲಿ ಎಂದು ಶಾಪ ಕೊಟ್ಟನು. ಈಶ್ವರನನ್ನು ನೋಡುವುದಕ್ಕೆ ಬಂದ ಋಷಿಗಳು ಸ್ತ್ರೀಯರಾದರು. ಪಾರ್ವತಿಯು ಪ್ರಸನ್ನಳಾಗಿ ಉಡುತ್ತಿದ್ದ ಸೀರೆಯನ್ನು ಬಿಸುಟು ನಗ್ನಳಾಗಿ ನೀರಿನಲ್ಲಿ ಇಳಿದು ಈಶ್ವರನನ್ನು ಸೆಳೆದುಕೊಂಡು ವಿಹರಿಸುತ್ತಿದ್ದಳು. ಅಂದಿನಿಂದ ಈ ವನಕ್ಕೆ ಯಾರು ಹೋದರೂ ಸ್ತ್ರೀಯರಾಗಿ ಹೋಗುತ್ತಿದ್ದರು. •

# 34.ಅಪ್ಪನಿಗೆ ಮದುವೆ ಮಾಡಿಸಿದ ಮಗ

ಒಮ್ಮೆ ಶಂತನು ನದಿಯನ್ನು ದಾಟುವಾಗ ಸತ್ಯವತಿ ಎಂಬ ಬೆಸ್ತರ ಕನ್ಯೆಯಲ್ಲಿ ಮೋಹಗೊಂಡು ಅವಳ ತಂದೆಯನ್ನು ವಿಚಾರಿಸಿದಾಗ ಅವನು ರಾಜನಿಗೆ ತನ್ನ ಮಗಳನ್ನು ಕೊಡಲು ಒಪ್ಪಿದನು. ಆದರೆ ಸತ್ಯವತಿಯ ಮಗನಿಗೆ ರಾಜ್ಯ ಸಿಗುವುದಾದರೆ ಮಗಳನ್ನು ಕೊಡುತ್ತೇನೆಂದು ಹೇಳಿದನು. ಆಗ ನಿರಾಶೆಯಿಂದ ಶಂತನು ಮಗ ದೇವಮೃತನನ್ನು ನೆನಪಿಸಿ ಅವನಿಗೆ ಅನ್ಯಾಯ ಆಗಬಾರದೆಂದು ಅರಮನೆಗೆ ಬಂದನು.

ಆದರೆ ಸತ್ಯವತಿಯನ್ನು ಮರೆಯದೇ ಅದೇ ಚಿಂತೆಯಲ್ಲಿದ್ದ ಶಂತನುವನ್ನು ಕಂಡ ಮಗ ದೇವಮೃತನು ಅವನ ಸಾರಥಿಯಿಂದ ಚಿಂತೆಯ ಕಾರಣವನ್ನು ತಿಳಿದು ದೇವಮೃತನು ತಂದೆಯ ಸಂತೋಷಕ್ಕಾಗಿ ತಾನು ರಾಜ್ಯವನ್ನು ಸ್ವೀಕರಿಸಿವುದಿಲ್ಲವೆಂದು ನಿಶ್ಚಯಿಸಿ, ದಾಸರಾಜನಲ್ಲಿಗೆ ಹೋಗಿ ಸತ್ಯವತಿಯನ್ನು ಕರೆತಂದು ತಂದೆಗೆ ಮದುವೆ ಮಾಡಿಸಿದನು. ದಾಸರಾಜನು ದೇವಮೃತನ ಮಕ್ಕಳು ಬಲಿಷ್ಠರಾಗುವರು. ತನ್ನ ಮೊಮ್ಮಕ್ಕಳು ದುರ್ಬಲರಾಗುವರು ಆಗ ಏನು ಮಾಡುವುದು? ಎಂದು ಕೇಳಿದಾಗ ದೇವಮೃತನು ಮದುವೆಯಾಗದೆ ಇರುವ ನಿರ್ಧಾರವನ್ನು ತಿಳಿಸಿದನು.

ಗಂಗಾತನಯನಾದ ದೇವವ್ರತನು ಈ ಎರಡು ಪ್ರತಿಜ್ಞೆ ತಿಳಿದವರು "ಭೀಷ್ಮ" ಎಂದು ಕರೆದರು. ಮಗನ ತ್ಯಾಗವನ್ನು ತಿಳಿದ ತಂದೆ ಶಂತನು ಮಗನಿಗೆ ಇಚ್ಛಾ ಮರಣ ವರವನ್ನು ಕರುಣಿಸಿದನು. ಶಂತನು–ಸತ್ಯವತಿಯರ ವಿವಾಹ ನಡೆಯಿತು. ಮುಂದೆ ಚಿತ್ರಾಂಗದ, ವಿಚಿತ್ರಾ ವೀರ್ಯರೆಂಬ ಮಕ್ಕಳಾದರು. ಮುಂದೆ ರಾಜ್ಯಭಾರ ಮಾಡಿದರು. •

# 35. ಶಿಬಿರಾಜನ ದಾನ

ಒಮ್ಮೆ ಶಿಬಿರಾಜನು ಒಂದು ದೊಡ್ಡ ಯಾಗವನ್ನು ಮಾಡಿದಾಗ ಅನೇಕ ದಾನಗಳನ್ನು ಮಾಡಿದನು ಇದರಿಂದ ಅವನ ಹೆಸರು ಲೋಕದಲ್ಲಿಯೇ ಪ್ರಸಿದ್ಧವಾಯಿತು. ಯಾರೇ ಆಗಲಿ ಯಾವುದೇ ಸಮಯದಲ್ಲಿ, ಬಂದು ದಾನ ಕೇಳಿದರೂ ಅವನು ಇಲ್ಲವೆನ್ನಲಿಲ್ಲ. ಈ ವಿಷಯವನ್ನು ತಿಳಿದು ಇಂದ್ರ ಮತ್ತು ಅಗ್ನಿ ಅವನನ್ನು ಪರೀಕ್ಷೆ ಮಾಡಲು ಆಗಮಿಸಿದರು. ಇಂದ್ರನು ಗಿಡುಗನಾದನು. ಅಗ್ನಿ ಪಾರಿವಾಳವಾದನು. ಗಿಡುಗವು ಪಾರಿವಾಳವನ್ನು ಬೆನ್ನಟ್ಟಿ ಬಂದಾಗ ಪಾರಿವಾಳವು ಶಿಬಿ ಚಕ್ರವರ್ತಿಯ ಬಳಿಗೆ ಬಂದು ರಕ್ಷಿಸು ಕಾಪಾಡು ಮಹಾರಾಜ ಎಂದು ಕೇಳಿಕೊಂಡಿತು.

ಪಾರಿವಾಳಕ್ಕೆ ರಕ್ಷಣೆ ಕೊಡುತ್ತೇನೆ ಎಂದು ಹೇಳಿದ. ರಾಜನು ತನ್ನ ಕೈಯಲ್ಲಿ ಹಿಡಿದು ಸಂತೈಸಿದನು. ಮರುಕ್ಷಣದಲ್ಲಿ ಗಿಡುಗವೂ ಸಹ ಶಿಬಿರಾಜನ ಸಮೀಪ ಬಂದು ಮಹಾರಾಜ ಈ ಪಾರಿವಾಳವು ನನ್ನ ಆಹಾರವಾಗಿದೆ. ಅದನ್ನು ಬಿಟ್ಟು ಬಿಡು ಎಂದು ಹೇಳಿತು. ಆಗ ರಾಜನು ವಿಚಾರ ಮಾಡಿ ಈ ಗಿಡುಗಕ್ಕಾಗಿ ಬೇರೆ ಯಾವುದೇ ಪಕ್ಷಿಯನ್ನು ಕೊಟ್ಟರೂ ಅದಕ್ಕೆ ಹಿಂಸೆಯಾಗುವುದನ್ನು ತಡೆಯಲು ಸಾಧ್ಯವಾಗುವುದಿಲ್ಲ. ಆದುದರಿಂದ ನನ್ನ ಮಾಂಸವನ್ನು ಕೊಡುವುದು ಉತ್ತಮ ಎಂದು ಭಾವಿಸಿ ಗಿಡುಗಕ್ಕೆ ತನ್ನ ಮಾಂಸವನ್ನೇ ಕೊಡುತ್ತೇನೆ ಎಂದನು. ಶಿಬಿರಾಜನ ಮಾತುಕೇಳಿ, ನಿನ್ನ ಮಾಂಸವನ್ನೇ ಕೊಡುವುದಾದರೆ ಪಾರಿವಾಳದಷ್ಟೇ ಮಾಂಸವನ್ನು ಕೊಡು ಎಂದಿತು ಗಿಡುಗ. ಆಗ ಮಹಾರಾಜನು ತಕ್ಕಡಿಯನ್ನು ತರಿಸಿ ಪಾರಿವಾಳವನ್ನು ತೂಕ ಮಾಡುತ್ತಾ ಇನ್ನೊಂದು ತಕ್ಕಡಿಯಲ್ಲಿ ತನ್ನ ಮಾಂಸವನ್ನು ಕತ್ತರಿಸಿ ಹಾಕಿದನು.

ಆದರೆ ಪಾರಿವಾಳವೇ ಭಾರವಾದಾಗ ಮತ್ತಷ್ಟು ಮಾಂಸ ಕತ್ತರಿಸಿ ಹಾಕಿದನು ಆದರೂ ಪಾರಿವಾಳವೇ ಭಾರವಾದಾಗ ತಾನು ಸ್ವತಹ ತಕ್ಕಡಿಯಲ್ಲಿ ಕುಳಿತುಕೊಂಡನು. ಇಂದ್ರ ಮತ್ತು ಅಗ್ನಿ ಇಬ್ಬರೂ ಪ್ರತ್ಯಕ್ಷರಾಗಿ ಶಿಬಿರಾಜನನ್ನು ಹೊಗಳಿದರು. ಅವನ ಶರೀರವನ್ನು ಮೊದಲಿನಂತೆ ಮಾಡಿದರು. ಅವನಿಗೆ ಉತ್ತಮ ಫಲಗಳು ಸಿಗುವಂತೆ ಆಶೀರ್ವಾದ ಮಾಡಿ ಸ್ವರ್ಗಕ್ಕೆ ಹಿಂತಿರುಗಿದರು. •

# 36. ದಕ್ಷ ಪ್ರಜಾಪತಿಯಿಂದ ವಿದ್ಯಾಭ್ಯಾಸ

ಹಿಂದೊಂದು ಕಾಲದಲ್ಲಿ ದಕ್ಷ ಪ್ರಜಾಪತಿಯಿಂದ ದೇವತೆಗಳು ಮತ್ತು ಅಸುರರು ವಿದ್ಯಾಭ್ಯಾಸ ಮಾಡುತ್ತಿದ್ದರು. ವಿದ್ಯಾಭ್ಯಾಸ ಮಾಡುವಾಗ ದಕ್ಷ ಪ್ರಜಾಪತಿಗಳು ದೇವತೆಗಳನ್ನು ಆಗಾಗ ಹೊಗಳುತ್ತಿದರು. ಇದರಿಂದ ಬೇಸರಗೊಂಡ ಅಸುರರು ಪ್ರಜಾಪತಿಯಲ್ಲಿ ಕೇಳಿದರು. ನೀವು ಯಾವಾಗಲೂ ದೇವತೆಗಳನ್ನು ಹೊಗಳುತ್ತೀರಿ ನಮ್ಮನ್ನು ಹೊಗಳುವುದಿಲ್ಲ ಕಾರಣವೇನು ಎಂದು ಕೇಳಿದರು.

ಪ್ರಜಾಪತಿಗಳು ನೇರವಾಗಿ ಇದಕ್ಕೆ ಉತ್ತರವನ್ನು ಕೊಡದೆ ಒಂದು ಸ್ಪರ್ಧೆಯನ್ನು ಏರ್ಪಡಿಸಿದರು. ಸ್ಪರ್ಧೆ ಯಾವುದು ಎಂದು ಕೇಳಿದರೆ ಅದೊಂದು ಔತಣಕೂಟ. ಔತಣಕೂಟದಲ್ಲಿ ಊಟ ಮಾಡುವವರು ತನ್ನ ಕೈಯನ್ನು ಮಡಚದೇ ಎಲೆಯಲ್ಲಿರುವ ಅನ್ನವನ್ನು ಕೈಯಲ್ಲಿ ಬಾಚಿ ನೇರವಾಗಿ ಬಾಯಿಗೆ ಹಾಕುವುದು. ಇದಕ್ಕೆ ದೇವತೆಗಳು ಹಾಗೂ ಅಸುರರು ಒಪ್ಪಿಗೆ ನೀಡಿದರು. ಅಸುರರು ತಾವು ಒಂದೇ ಸಾಲಿನಲ್ಲಿ ಕುಳಿತು ಮೊದಲು ಊಟ ಮಾಡುವುದಾಗಿ ತಿಳಿಸಿದರು.

ಮೊದಲನೇ ಪಂಕ್ತಿಯಲ್ಲಿ ಅಸುರರು ಸಾಲಾಗಿ ಊಟಕ್ಕೆ ಕುಳಿತರು, ಇವರಿಗೆ ಎಲೆ ಹಾಕಿ ಬಡಿಸಲಾಯಿತು. ಅಸುರರು ಊಟ ಶುರು ಮಡಿದರು. ಶರ್ತದ ಪ್ರಕಾರ ಕೈಯನ್ನು ಮಡಚದೆ ಅನ್ನಕ್ಕೆ ಕೈಹಾಕಿ ನೆಟ್ಟಗೆ ಮೇಲೆ ಹೋಗಿ ಬಾಯಿಗೆ ಬೀಳಿಸಿದರು. ಅನ್ನ, ಸಾರು, ಪಲ್ಯ ಅಸುರರ ಬಾಯಿ, ಮುಖದ ಮೇಲೆಲ್ಲಾ ಬಿತ್ತು. ಹೊಟ್ಟೆ ತುಂಬಾ ಊಟ ಮಾಡಲು ಆಗಲಿಲ್ಲ. ಅಸುರರು ಎದ್ದು ಕೈ ತೊಳೆದರು.

ಎರಡನೇ ಪಂಕ್ತಿಯಲ್ಲಿ ದೇವತೆಗಳು ಊಟಕ್ಕೆ ಕುಳಿತುಕೊಳ್ಳುವ ಮೊದಲು ತಾವು ಎದರು–ಬದರಾಗಿ ಎರಡು ಸಾಲಿನಲ್ಲಿ ಕುಳಿತುಕೊಳ್ಳುವುದಾಗಿ ಪ್ರಜಾಪತಿಯಲ್ಲಿ ತಿಳಿಸಿದರು. ಅದಕ್ಕೆ ಪ್ರಜಾಪತಿ ಒಪ್ಪಿದರು. ನಂತ್ರ ಎಲೆಯನ್ನು ಹಾಕಿ ಊಟಕ್ಕೆ ಬಡಿಸಲಾಯ್ತು. ದೇವತೆಗಳು ನೇರವಾಗಿ ಕೈಯನ್ನು ಅನ್ನಕ್ಕೆ ಹಾಕಿ, ಅನ್ನವನ್ನು ಬಾಚಿ ತನ್ನ ಎದುರುಗಡೆ ಇದ್ದವರ ಬಾಯಿಗೆ ನೇರವಾಗಿ ಹಾಕಿದರು. ಯಾವುದೇ ಕಷ್ಟ ಇಲ್ಲದೆ ಹೊಟ್ಟೆ ತುಂಬಾ ಉಂಡು ತೇಗಿದರು. ಆಗ ಗುರುಗಳು ಹೇಳಿದರು ಇದಕ್ಕೆ ನಾನು ದೇವತೆಗಳನ್ನು ಹೊಗಳುವುದು, ಅವರು ಬುದ್ಧಿವಂತರು ಎಂಬುವುದಾಗಿ ತಿಳಿಸಿದರು. •

# 37. ಹೊಸ್ತಿಲ ಅಜ್ಜಿ

ಹೊಸ್ತಿಲ ಅಜ್ಜಿ ಎನ್ನುವುದು ಗ್ರಾಮೀಣ ಪ್ರದೇಶದ ವಿಶಿಷ್ಟ ಆಚರಣೆಯಾಗಿದೆ. ಸಾಧಾರಣವಾಗಿ ಕುಂದಾಪುರ ತಾಲೂಕಿನ ಗ್ರಾಮೀಣ ಭಾಗದಲ್ಲಿ ಸೋಣೆ ತಿಂಗಳಲ್ಲಿ ಅಂದರೆ ಸಿಂಹ ಸಂಕ್ರಮಣದಿಂದ ಕನ್ಯಾ ಸಂಕ್ರಮಣದ ತನಕ ಒಂದು ತಿಂಗಳ ಅವಧಿಯಲ್ಲಿ ಯಾವುದಾದರೂ ಒಂದು ದಿನ ಹೊಸ್ತಿಲ ಅಜ್ಜಿ ಹಬ್ಬ ಆಚರಿಸುತ್ತಾರೆ. ಸೋಣೆ(ಸಿಂಹ) ಸಂಕ್ರಮಣದಂದು ಗೃಹಿಣಿಯರು ಗದ್ದೆಯ ಅಂಚಿನಲ್ಲಿ ಬೆಳೆಯುವ ಕೆಂಪು ಬಣ್ಣದ ಸೋಣೆ ಹೂವನ್ನು ತಂದು, ಹೊಸ್ತಿಲನ್ನು ಬರೆದು ಸೋಣೆ ಹೂವು ಹಾಗೂ ಇತರ ಹೂಗಳಿಂದ ಮನೆಯ ದ್ವಾರಬಗಿಲಿನ ಹೊಸ್ತಿಲಿಗೆ ಅಲಂಕಾರ ಮಾಡಿ ಅರಸಿನ, ಕುಂಕುಮವನ್ನು ಲೇಪಿಸಿ ಕಾಲುದೀಪವನ್ನು ಬೆಳಗಿಸಿ, ಎಲೆ-ಅಡಿಕೆಯನ್ನು ಇಟ್ಟು ತೆಂಗಿನಕಾಯಿಯನ್ನು ಒಡೆದು ಆರತಿ ಮಾಡುವುದು ಪದ್ದತಿ.

ಸೋಣೆ ತಿಂಗಳಲ್ಲಿ ಪ್ರತಿದಿನ ಹೊಸ್ತಿಲ ಪೂಜೆ ಮಾಡುವ ಪದ್ಧತಿ ಮಹಿಳೆಯರಲ್ಲಿದೆ. ಲಕ್ಷ್ಮೀದೇವಿಯೂ ಇದೇ ಹೊಸ್ತಿಲ ದ್ವಾರದಿಂದ ಮನೆಯ ಒಳಗೆ ದಿನಕ್ಕೊಮ್ಮೆ ಬರುತ್ತಾರಂತೆ, ಸೋಣೆ ತಿಂಗಳಲ್ಲಿ ಯಾವುದೇ ಒಂದು ದಿನವನ್ನು ಆಯ್ದು ಹೊಸ್ತಿಲಜ್ಜಿಯ ವಿಶೇಷ ಕಾರ್ಯಕ್ರಮವನ್ನು ಆಚರಿಸುತ್ತಾರೆ. ಉದ್ದಿನ ದೋಸೆ, ಹೆಸರಿನ ತೋವೆಯನ್ನು ಮಾಡುತ್ತಾರೆ. ಬಗೆಬಗೆಯ ತಿನಿಸು, ಸಿಹಿ ದೋಸೆಗಳನ್ನು ಮಾಡಿ ಹೊಸ್ತಿಲಜ್ಜಿಗೆ ಬಡಿಸುತ್ತಾರೆ. ವೀಳ್ಯದೆಲೆ,ಅಡಿಕೆ ಹಾಗೂ ಹೂಗಳನ್ನು ದೋಸೆ ಹಾಗೂ ತಿಂಡಿಯ ಮೇಲೆ ಇಡುತ್ತಾರೆ. ಹೊಸ್ತಿಲ ಅಜ್ಜಿಗೆ ಆರತಿ ಮಾಡಿ, ಪ್ರಾರ್ಥನೆ ಮಾಡಿಕೊಳ್ಳುತ್ತಾರೆ. "ಹೇ ಅಜ್ಜಿ ನನ್ನ ಕರೆಯ ಮೇರೆಗೆ ಪಿತೃಲೋಕದಿಂದ ಇಲ್ಲಿಯವರೆಗೆ ಬಂದು ಈ ನನ್ನ ಕಾರ್ಯಕ್ರಮದಲ್ಲಿ ಬಾಗಿಯಾಗಿ ಸಂತೋಷ ಪಟ್ಟಿದ್ದೀಯಾ. ನಮ್ಮನ್ನು ಆಶೀರ್ವದಿಸು ಎಂಬುದಾಗಿ ಪ್ರಾರ್ಥಿಸುತ್ತಾರೆ. ಪೂಜೆ ಮುಗಿದ ನಂತರ ಪೂಜೆ ಮಾಡಿದ ಮಹಿಳೆ ಬೆನ್ನು ಹಾಕಿದಾಗ ಮನೆಯ ಸಣ್ಣ ಮಕ್ಕಳು ದೋಸೆ ಹಾಗೂ ತಿಂಡಿಗಳನ್ನು ಕದ್ದು ಬಿಡುತ್ತಾರೆ, ಅಲ್ಲಿಗೆ ಅಜ್ಜಿ ಓಡಿ ಹೋದಳು ಎನ್ನುವ ನಂಬಿಕೆ ಜನರದ್ದು. •

# 38. ಒಬ್ಬ ವ್ಯಾಪಾರಿಯ ಕಥೆ

ಒಂದಾನೊಂದು ಕಾಲದಲ್ಲಿ ಕಾಳಾವರ ಎಂಬ ಊರಿನಲ್ಲಿ ಒಬ್ಬ ವ್ಯಾಪಾರಿ ಇದ್ದ. ಅವನು ಕೊನೆಯುಸಿರೆಳೆಯುವಾಗ ಬಹಳ ಸುಲಭವಾಗಿ ದೇವರನ್ನು ನೆನೆಯುವಂತಾಗಬೇಕೆಂದು ಅವನು ತನ್ನ ಆರು ಜನ ಮಕ್ಕಳಿಗೆ ಮಂಜುನಾಥ, ನಾರಾಯಣ, ಗೋವಿಂದ, ವಾಸುದೇವ, ರಾಮ, ಕೃಷ್ಣ ಎಂಬುದಾಗಿ ನಾಮಕರಣ

ಮಾಡಲಾಗಿತ್ತು. ತಾನು ಸಾಯುವ ಸಂದರ್ಭ ಅವರ ಹೆಸರನ್ನು ಕರೆದೇ ಬಿಡುವೆನೆಂಬ ಭರವಸೆ ಅವನದು. ಅವನ ಕೊನೆಯ ಗಳಿಗೆ ಬಂತು, ತನ್ನ ಎಲ್ಲಾ ಮಕ್ಕಳನ್ನು ಒಬ್ಬೊಬ್ಬರನ್ನಾಗಿ ಹೆಸರು ಹಿಡಿದು ಕೂಗಿ ಕರೆದ. 6 ಜನ ಮಕ್ಕಳಿದ್ದರು. ಒಟ್ಟು 6 ಬಾರಿ ದೇವರನ್ನು ನೆನೆದಂತಾಯಿತು. ಮಕ್ಕಳೆಲ್ಲರೂ ಅವನ ಮಂಚದ ಸುತ್ತ ನೆರೆದರು. ಅವರನ್ನೆಲ್ಲಾ ನೋಡುತ್ತಿದ್ದಂತೆ ಅವನ ಚಿಂತೆ ಹೆಚ್ಚಾಯಿತು. ಅಯ್ಯೋ ನೀವೆಲ್ಲರೂ ಬಂದು ಬಿಟ್ಟಿರಾ? ಈಗ ಅಂಗಡಿಯಲ್ಲಿ ಯಾರಿದ್ದಾರೆ? ಎಂದು ಪ್ರಲಾಪಿಸುತ್ತಾ ಕೊನೆಯುಸಿರು ಬಿಟ್ಟ. ಅಂಗಡಿಯೇ ಅವನ ಉಸಿರಾಗಿತ್ತು. ಕೊನೆ ಗಳಿಗೆಯಲ್ಲಿ ದೇವರನ್ನು ಉಸಿರಾಗಿಸುವುದು ಅವನಿಗೆ ಸಾಧ್ಯವಾಗಲಿಲ್ಲ. •

## 39. ಸಾಧುವಿನ ಸಮುದ್ರ ಸ್ನಾನ

ಒಬ್ಬ ಸಾಧು ಅಮವಾಸ್ಯೆಯ ದಿನ ಸಮುದ್ರ ಸ್ನಾನಕ್ಕಾಗಿ ಹೋಗುತ್ತಾನೆ. ಹೋಗುವಾಗ ಸಮುದ್ರದಲ್ಲಿ ಕೆಲವರು ಸ್ನಾನ ಮಾಡುತ್ತಾ ಇರುತ್ತಾರೆ ಇನ್ನೂ ಕೆಲವರು ಸ್ನಾನಕ್ಕಾಗಿ ಹಿಂದಿನಿಂದ ಬರುತ್ತಾರೆ. ಆ ಸಮಯದಲ್ಲಿ ಸಾಧುವಿನ ಕೈಯಲ್ಲಿ ಒಂದು ಕಮಂಡಲವಿರುತ್ತದೆ. ತಾನು ಸ್ನಾನ ಮಾಡುವಾಗ ಯಾರಾದರೂ ತನ್ನ ಕಮಂಡಲವನ್ನು ತೆಗೆದುಕೊಂಡು ಹೋಗಬಹುದು ಎಂಬ ಭಯದಿಂದ ಸಮುದ್ರದ ದಡದಲ್ಲಿ ಮರಳಿನಲ್ಲಿ ಹೂತು ಮರಳನ್ನು ರಾಶಿ ಮಾಡಿ(ಗುಪ್ಪೆ) ಅದರ ಮೇಲೆ ಒಂದು ಗಿಡವನ್ನು ನೆಟ್ಟು ಸ್ನಾನಕ್ಕೆ ಹೋದರು. ಇದರ ಉದ್ದೇಶವನ್ನು ಅರಿಯದ ಜನರು ತಾವು ಸಹ ಮರಳಿನ ಗುಪ್ಪೆ ಮಾಡಿ ಅದರಲ್ಲಿ ಒಂದು ಗಿಡವನ್ನು ನೆಟ್ಟು ಸ್ನಾನಕ್ಕೆ ಹೋದರು. ಸಾಧುವು ಸಮುದ್ರದಿಂದ ದಡಕ್ಕೆ ಬರುವಾಗ ಮರಳಿನ ಜಾಗದಲ್ಲಿ ಸಾವಿರಕ್ಕೂ ಮಿಕ್ಕಿ ಮರಳಿನ ರಾಶಿಗಳು ಕಾಣುತ್ತವೆ. ಸಾಧುವಿಗೆ ತಾನು ಹೂತಿಟ್ಟ ಕಮಂಡಲವನ್ನು ಹುಡುಕುವುದು ಕಷ್ಟವಾಯಿತು. ಉದ್ದೇಶವನ್ನು ತಿಳಿಯದೇ ಮಾಡುವ ಕರ್ಮಗಳು ಅನರ್ಥಕಾರಿ. •

# 40. ರಾಣಿಯ ಕಣ್ಣೀರು

ಒಂದು ದಿನ ರಾಣಿಯು ಕಣ್ಣೀರು ಸುರಿಸಲಾರಂಭಿಸಿದಳು. ರಾಣಿ ಅಶ್ರುಪೂರ್ಣವಾದದನ್ನು ಕಂಡು ರಾಣೀವಾಸದ ಸ್ತ್ರೀಯರೆಲ್ಲಾ ಅಳಲಾರಂಭಿಸಿದರು. ಆ ರೋಧನ ಸೇವಕರಿಗೂ ಹಬ್ಬಿತು. ಸಮಾಧಾನ ಪಡಿಸಲಾಗದಷ್ಟು ದು:ಖದಲ್ಲಿ ರಾಣಿ ಇದ್ದದ್ದನ್ನು ಕಂಡು ರಾಜನೂ ಸಹಾನುಭೂತಿ ರೂಪವಾಗಿ ಬಿಕ್ಕಿ-ಬಿಕ್ಕಿ ಅಳಲಾರಂಭಿಸಿದನು. ಈ ದೃಶ್ಯ ಇಡೀ ನಗರವೇ ಜೋರಾಗಿ ನಿಲ್ಲಲಾರದೇ ರೋಧಿಸುವಂತೆ ಮಾಡಿತು. ಕೊನೆಗೆ ಬುದ್ಧಿವಂತ ಮನುಷ್ಯನು ವಿಚಾರಣೆ ಮಾಡಲಾಗಿ ರಾಣಿ-ತನ್ನ ದಾಸಿ ದುಃಖದಲ್ಲಿದ್ದುದರಿಂದ ತಾನೂ ಅತ್ತದ್ದಾಗಿ ಹೇಳಿದಳು. ಜಾತಿಯಲ್ಲಿ ಅಗಸರವಳಾದ ಆ ದಾಸಿಯನ್ನೇ ವಿಚಾರಿಸಲು ತನ್ನ ಪ್ರೀತಿಯ ಕತ್ತೆಯ ಏಕಾಏಕಿ ಮರಣದಿಂದ ತನ್ನ ದುಃಖಕ್ಕೆ ಕಾರಣವೆಂದು ಹೇಳಿದಳು. ಈ ಸುದ್ಧಿ ಹರಡಲಾದ ಮೇಲೆ ಅಳುವುದು ನಿಂತಿತು ಮತ್ತು ಅಲ್ಲಿ ನಗೆ-ನಾಚಿಕೆ ಹರಡಿತು. ಆದ್ಧರಿಂದ ಕರ್ಮ ಮಾಡುವಾಗ ವಿಚಾರ ಮಾಡಿ ಮಾಡಬೇಕು. •

# 41. ಸನ್ಯಾಸಿಯ ಕಥೆ

ಒಬ್ಬ ಸನ್ಯಾಸಿ ಒಂದು ಸುಂದರವಾದ ತೋಟವನ್ನು ಮಾಡಿ ಅದರಲ್ಲಿ ಫಲ-ಪುಷ್ಪಗಳನ್ನು ನೀಡುವ ಅನೇಕ ಗಿಡ-ಮರಗಳನ್ನು ಬೆಳೆಸಿದ್ದ, ಆದರೆ ಅವನಲ್ಲಿ ಒಂದು ವಿಧವಾದ ಅಹಂಕಾರದಿಂದ ಅಸೂಯೆ, ಅಸೂಯೆಯಿಂದ ದ್ವೇಷ-ತುಂಬಿಕೊಂಡಿತ್ತು.

ಒಂದು ಬಾರಿ ಭಗವಂತ ಈ ಋಷಿ ಕಷಾಯ ಬಟ್ಟೆಯನ್ನು ಧರಿಸಿದ್ದಾನೆ. ಆದರೆ ಮನ ಕಷಾಯವನ್ನು ಬಿಟ್ಟಿಲ್ಲ. ಅವನ ಹೃದಯ ದ್ವೇಷ, ಅಸೂಯೆ, ಅಹಂಕಾರಗಳಿಂದ ತುಂಬಿದೆ ಎಂದು ಯೋಚಿಸಿ ಅವನ ಅಹಂಕಾರವನ್ನು ನಾಶಮಾಡಬೇಕು ಎಂದು ನಿಶ್ಚಯಿಸಿದ. ಒಬ್ಬ ಮುದಿ ಬ್ರಾಹ್ಮಣನ ವೇಷವನ್ನು ಧರಿಸಿ ಭಗವಂತ ಈ ಋಷಿಯ ತೋಟವನ್ನು ಪ್ರವೇಶ ಮಾಡಿದ. ಫಲ ಪುಷ್ಪ ಭರಿತವಾದ ಆ ತೋಟವನ್ನು ನೋಡಿ "ಆಹಾ, ಎಷ್ಟು ಸುಂದರವಾಗಿದೆ ಈ ತೋಟ, ಹೂಗಳು, ಹಣ್ಣುಗಳು ಎಷ್ಟೊಂದು ಆಕರ್ಷಣೀಯವಾಗಿದೆ. ಈ ತೋಟವನ್ನು ಮಾಡಿದವರು ಯಾರು? ಎಂದು ಗಟ್ಟಿಗಟ್ಟಿಯಾಗಿ ಹೇಳಿಕೊಂಡ.

ಆಗ ಋಷಿ ತನ್ನ ಕುಟೀರದಿಂದ ಹೊರಗೆ ಬಂದು ಬ್ರಾಹ್ಮಣೋತ್ತಮ, ರಾತ್ರಿ-ಹಗಲು ಕಷ್ಟಪಟ್ಟು ಈ ತೋಟವನ್ನು ಬೆಳೆಸಿ ರಕ್ಷಿಸಿದವನು ನಾನು ಇದು ಇಷ್ಟು

ಶೋಭಿಸಲು ನಾನೇ ಕಾರಣ, ನೀರು ಹಾಕುವವ ನಾನು, ಗೊಬ್ಬರ ಹಾಕುವವ ನಾನು, ನಾನೇ ಇದನ್ನು ಶುಚಿಯಾಗಿ ಇಟ್ಟುಕೊಳ್ಳುವವನು ನಾನು ಎಂದು ಹೇಳುತ್ತಾ ಹೋದ. ಅನಂತರ ಆ ಬ್ರಾಹ್ಮಣ ತೋಟದಿಂದ ಹೊರಕ್ಕೆ ಹೋದ.

ಸ್ವಲ್ಪ ಸಮಯದಲ್ಲಿ ಒಂದು ಹಸು ಆ ತೋಟವನ್ನು ಪ್ರವೇಶಿಸಿತು. ಪುಷ್ಪಗಳಿಂದ ಕೂಡಿದ ಗಿಡಗಳನ್ನು ಹಾಳು ಮಾಡ ತೊಡಗಿತು. ಇದನ್ನು ನೋಡಿದ ಆ ಸನ್ಯಾಸಿ ವಿಶೇಷವಾದ ಸಿಟ್ಟಿನಿಂದ ಒಂದು ದೊಡ್ಡ ದೊಣ್ಣೆಯನ್ನು ಬೀಸಿ ಆ ಹಸುವಿಗೆ ಎಸೆದ. ದೊಣ್ಣೆ ಬಿದ್ದುದೇ ತಡ ಆ ಹಸು ಕೆಳಗೆ ಬಿದ್ದು ಪ್ರಾಣ ಬಿಟ್ಟಿತು. ಸನ್ಯಾಸಿ ಈ ದೃಶ್ಯವನ್ನು ನೋಡಿ ಹಸುವನ್ನು ಕೊಂದ ಪಾಪ ತನಗೆ ಬಂತಲ್ಲಾ ಎಂದು ಚಿಂತಿಸತೊಡಗಿದ ಅಷ್ಟರಲ್ಲಿ ಆ ಮುದಿ ಬ್ರಾಹ್ಮಣ ಮತ್ತೆ ಅಲ್ಲಿಗೆ ಬಂದು ಸತ್ತು ಬಿದ್ದ ಹಸುವನ್ನು ನೋಡಿ "ಅಯ್ಯೋ ಪಾಪ, ಈ ಹಸುವನ್ನು ಕೊಂದವರು ಯಾರು? ಎಂದು ಸನ್ಯಾಸಿಯನ್ನು ಕೇಳಿದ.ಆಗ ಸನ್ಯಾಸಿ "ಎಲ್ಲಾ ದೈವೇಚ್ಛೆ" ಇಲ್ಲವಾದರೆ ಅದನ್ನು ಯಾರಿಂದಲೂ ಕೊಲ್ಲಲು ಸಾಧ್ಯವೇ? ಎಂದು ಉತ್ತರವನ್ನಿತ್ತ. ಈ ಮಾತನ್ನು ಕೇಳಿದ ಬ್ರಾಹ್ಮಣ ತೋಟವನ್ನು ಸುಂದರವಾಗಿ ಬೆಳೆಸಿದವ ನೀನು ಹಸುವನ್ನು ಕೊಂದದ್ದು ಮಾತ್ರ ದೈವ. ಒಳ್ಳೆಯದ್ದು ಮಾಡಿದ್ದು ನಾನು ಎಂದು ಹೇಳುವ ನೀನು ಕೆಟ್ಟದಾದುದಕ್ಕೆ ದೈವ ಎಂದು ಹೇಳುತ್ತೀಯಾ. ನಾನು ಮುದಿ ಬ್ರಾಹ್ಮಣನಲ್ಲಾ, ನಿನ್ನ ಅಹಂಕಾರವನ್ನು ನಾಶ ಮಾಡಲು ಬಂದ ಭಗವಂತನೆಂದು ಹೇಳಿ ಅದೃಶ್ಯನಾದನು. •

## 42. ಸರ್ವಸಂಗ ಪರಿತ್ಯಾಗಿ

ಒಬ್ಬ ವ್ಯಕ್ತಿ, ಸರ್ವಸಂಗ ಪರಿತ್ಯಾಗ ಮಾಡಿ ಹೃಷಿಕೇಶಕ್ಕೆ ಹೋಗಿ ಗಂಗಾನದಿ ತೀರದಲ್ಲಿ ಧ್ಯಾನ ಮಾಡುತ್ತಾಲಿದ್ದನು. ಆಗ ಅಲ್ಲಿಗೆ ಒಂದು ಟೂರಿಸ್ಟ್ ಬಸ್ಸು ಬಂತು ಅದರಿಂದ ಕೆಲವು ಯಾತ್ರಿಕರು ಬಸ್ಸಿನಿಂದ ಕೆಳಗಿಳಿದರು. ಅವರು ತಮ್ಮಲ್ಲಿ ಮಾತನಾಡುವ ಭಾಷೆಯ ಕುರಿತು ಈ ಸನ್ಯಾಸಿಗೆ ಕುತೂಹಲ ಬಂತು. ಏಕೆಂದರೆ ಅವರು ಕನ್ನಡ ಭಾಷೆಯಲ್ಲಿ ಮಾತನಾಡುತ್ತಿದ್ದರು. ಹೀಗೆ ಆತ ತನ್ನಲ್ಲಿರುವ ಭಾಷಾಭಿಮಾನ ಜಾಗೃತವಾಯಿತು. ಆ ಯಾತ್ರಿಕರೊಡನೆ ಅವರು ಹೀಗೆಂದು ಪ್ರಶ್ನಿಸಿದನು. ನೀವು ಎಲ್ಲಿಂದ ಬರುತ್ತಿದ್ದೀರಿ. ನಾವು ಕರ್ನಾಟಕದಿಂದ ಎಂದು ಉತ್ತರ ಬಂತು. ಕರ್ನಾಟಕದಲ್ಲಿ ಯಾವ ಜಿಲ್ಲೆ? ಬೆಂಗಳೂರು ಜಿಲ್ಲೆ ಅಲ್ಲಿ ಯಾವ ಗ್ರಾಮ? ಕಾಗೋಡು ಗ್ರಾಮ, ಯಾವ ಬೀದಿ? ಈಶ್ವರ ದೇವಸ್ಥಾನ ಇರುವ ಬೀದಿ ಅಲ್ಲಿ ಯಾವ ಮನೆ? ಹನ್ನೊಂದನೆಯ ನಂಬ್ರದ ಮನೆ ಹಾಗಾದರೆ ಅದರ ಪಕ್ಕದ

ಹನ್ನೆರಡನೆಯ ನಂಬ್ರದ ಮನೆಯಲ್ಲಿ ಒಬ್ಬರು ಮುದುಕರಿದ್ದಾರಲ್ಲಾ. ಅವರು ಚೆನ್ನಾಗಿದ್ದಾರಾ? ಯಾರು ಗೋವಿಂದಾಚಾರ್ಯರೇ ಅವರು ಸತ್ತು ಒಂದು ವರ್ಷ ಇಷ್ಟರಲ್ಲೇ ಕಳೆದು ಬಿಟ್ಟಿದೆ ಇದನ್ನು ಕೇಳಿ ಆ ಸನ್ಯಾಸಿ "ಗೋಳೋ" ಎಂದು ಅತ್ತು ಬಿಟ್ಟರು, ಸರ್ವ ಸಂಗ ಪರಿತ್ಯಾಗ ಮಾಡಿದ ಸನ್ಯಾಸಿಗೆ ಈ ಅಭಿಮಾನಗಳು ವ್ಯಾಮೋಹವನ್ನುಂಟು ಮಾಡಿದವು. •

# 43. ಲೋಬಿ ಮತ್ತು ಮಹಾಲೋಬಿ

ಒಂದಾನೊಂದು ಊರಿನಲ್ಲಿ ಅಣ್ಣ-ತಮ್ಮ ಇಬ್ಬರು ವಾಸ ಮಾಡಿಕೊಂಡಿದ್ದರು. ಈ ಇಬ್ಬರೂ ಎಳವೆಯಲ್ಲಿಯೇ ತಂದೆ-ತಾಯಿಯನ್ನು ಕಳೆದುಕೊಂಡು ಅಜ್ಜಿಯ ಆಶ್ರಯದಲ್ಲಿ ಬೆಳೆದರು. ಪ್ರಾಯಕ್ಕೆ ಬರುವ ಮುನ್ನವೇ ಅಜ್ಜಿಯನ್ನು ಕಳೆದುಕೊಂಡು ತಬ್ಬಲಿಯಾದರು. ಊರಿನವರ ಸಹಾಯದಿಂದ ಅಜ್ಜಿಯ ಅಂತ್ಯಕ್ರಿಯೆಯನ್ನು ಮಾಡಿದರು. ನಂತರ ಅಲ್ಲಿ-ಇಲ್ಲಿ ಕೂಲಿ ಕೆಲಸ ಮಾಡಿ ಜೀವಿಸುತ್ತಿದ್ದರು. ಅವರು ಮನೆಯಲ್ಲಿ ಅಡುಗೆ ಮಾಡುತ್ತಿರಲಿಲ್ಲ. ಊರಿನಲ್ಲಿ ಯಾವುದೇ ಸಭೆ, ಸಮಾರಂಭ ಇದ್ದರೆ ಅಲ್ಲಿಗೆ ಹೋಗಿ ಉಂಡು ಬರುತ್ತಿದ್ದರು. ಹಾಗಾಗಿ ಅಣ್ಣನಿಗೆ ಮಹಾಲೋಬಿ, ತಮ್ಮನಿಗೆ ಲೋಬಿ ಎಂತಲೂ ಊರಿನವರು ಕರೆಯುತ್ತಿದ್ದರು. ಉಡುಪು ಸೊಂಟಕ್ಕೆ ಒಂದು ಪಂಚೆ ಹೆಗಲಿಗೆ ಒಂದು ಶಾಲು ಇಷ್ಟೇ ಇವರಲ್ಲಿ ಇರುವ ಬಟ್ಟೆ. ರಾತ್ರಿ ಕಾಲದಲ್ಲಿ ಚಳಿಯಾದರೆ ಅಣ್ಣ-ತಮ್ಮ ತಬ್ಬಿಕೊಂಡು ಮಲಗುತ್ತಿದ್ದರು. ಸಂಪಾದಿಸಿದ ಹಣವನ್ನು ಕೂಡಿ ಹಾಕುವುದರಲ್ಲಿ ಜಿಪುಣರು. ಒಂದು ದಿನ ಮಹಾಲೋಬಿ ರಾತ್ರಿ ಹೊತ್ತು ಶ್ರಾದ್ಧ ಊಟಕ್ಕಾಗಿ ಪಕ್ಕದ ಊರಿಗೆ ಹೋದನು. ಅರ್ಧ ದಾರಿಯಲ್ಲಿ ಹೋಗುವಾಗ ಚಿಮಣಿ ದೀಪದ ನೆನಪಾಯಿತು. ತಮ್ಮನು ರಾತ್ರಿ ಹೊತ್ತು ಸುಮ್ಮನೆ ಚಿಮಣಿ ಊರಿಸುತ್ತಾನೆ.ಇದನ್ನು ಹೇಳುವುದಕ್ಕಾಗಿ ಅಣ್ಣನು ವಾಪಾಸು ಮನೆಗೆ ಹೊರಟ. ಮನೆಗೆ ತಲುಪಿ ತಮ್ಮನನ್ನು ಕರೆದು ಸುಮ್ಮನೆ ಚಿಮಣಿ ದೀಪ ಊರಿಸಿ ಚಿಮಣಿ ಎಣ್ಣೆ ಖರ್ಚು ಮಾಡುವುದು ಬೇಡ ಹೇಳಿ ಹೋಗೋಣ ಎಂದು ಬಂದೆ ಅಂದ ಅಣ್ಣ. ಅದಕ್ಕೆ ತಮ್ಮನು ನಾನು ಚಿಮಣಿ ದೀಪ ಊರಿಸಲಿಲ್ಲ, ಕತ್ತಲೆಯಲ್ಲೇ ಇದ್ದೇನೆ. ಎಂದ ಅಲ್ಲದೆ ಅಣ್ಣನಲ್ಲಿ ನೀನು 2 ಮೈಲು ದೂರ ಹೋಗಿ ವಾಪಾಸು ಮನೆ ತನಕ ನಡೆದುಕೊಂಡು ಬಂದಿದ್ದೀಯಾ, ನಿನ್ನ ಚಪ್ಪಲಿ ಎಷ್ಟು ಸವೆದಿರಬಹುದು. ಎಂದು ಹೇಳಿದ. ಅದಕ್ಕೆ ಅಣ್ಣನು ನಾನು ಚಪ್ಪಲಿ ಧರಿಸಲಿಲ್ಲ, ಬರೀ ಕಾಲಿನಲ್ಲಿ ಹೋಗಿದ್ದೇನೆ ಎಂದು ತಿಳಿಸಿದ. ಲೋಬಿ ಮತ್ತು ಮಹಾಲೋಬಿ ಮನೆಯಲ್ಲಿ ಹಣವನ್ನು ಕೂಡಿಸಿ ಇಟ್ಟಿದ್ದರು. ಈ ವರ್ತಮಾನವನ್ನು ತಿಳಿದ ಅದೇ ಊರಿನ

ಜೇಪುಣನೊಬ್ಬ ಇವರಿಬ್ಬರೂ ಇಲ್ಲದ ಸಮಯದಲ್ಲಿ ಮನೆಯೊಳಕ್ಕೆ ಪ್ರವೇಶಿಸಿ ಅಪಾರ ಪ್ರಮಾಣದ ಹಣವನ್ನು ಕದ್ದುಕೊಂಡು ಹೋದನು. **Money comes and goes But morality comes and Grows.** ಹಣವು ಬರುತ್ತದೆ, ಹೋಗುತ್ತದೆ ಆದರೆ ನೈತಿಕತೆಯು ವೃದ್ಧಿಯಾಗುತ್ತಾ ಹೋಗುತ್ತದೆ. ವಿತ್ತ(ಹಣ)ವನ್ನು ಲೋಕಕರ್ಪಿಸಿ, ಚಿತ್ತವನ್ನು ಭಗವಂತನಿಗೆ ಅರ್ಪಿಸಿದಾಗಲೇ ಶಾಂತಿ ದೊರಕುವುದು. •

## 44. ಆಶ್ರಯದಾತ ಸತ್ಯಲೋಕ

ಧರಣಿಯ ಮೇಲೊಂದು ಮರಹುಟ್ಟಿ ವರವಾಯ್ತು. ಮರಹುಟ್ಟಿ ವರವಾಯ್ತು ಎಂದರೆ ಬದುಕಿಗೆ ಆಶ್ರಯವಾಯ್ತು ಎಂದು ಅರ್ಥ. ಇದು ಎಂತಹ ಆಶ್ರಯ ಎಂದರೆ ಉಸಿರಾಡುವ ಎಲ್ಲಾ ಜೀವಿಗಳಿಗೂ ಆಶ್ರಯವಾಯಿತು ಎಂದು ತಿಳಿಯಬೇಕು. ಮರ ಎಂದರೆ ಇಡೀ ಸತ್ಯಲೋಕ ಎಂದು ಅರ್ಥಮಾಡಿಕೊಳ್ಳಬೇಕು.

ಸಸ್ಯಗಳು, ಪ್ರಾಣಿಗಳು, ಪಕ್ಷಿಗಳು ಹಾಗೂ ಮನುಷ್ಯರು ಈ ನಾಲ್ವರಲ್ಲಿ ಮೊದಲು ಈ ಭೂಮಿಯ ಮೇಲೆ ಕಾಣಿಸಿಕೊಂಡದ್ದು ಸಸ್ಯ ಸಂಕುಲ. ಅನಂತರ ಪ್ರಾಣಿ, ಪಕ್ಷಿ, ಕೀಟ ಕೊನೆಗೆ ಬಂದವನೇ ಮನುಷ್ಯ. ಇಂದಿಗೂ ಸಹ ಪ್ರಾಣಿ, ಪಕ್ಷಿ, ಮನುಷ್ಯರಾದಿಯಾಗಿ ಎಲ್ಲಾ ಜೀವಿಗಳಿಗೂ ಆಹಾರವನ್ನು ಸಸ್ಯಗಳೇ ಒದಗಿಸುವುದು, ಹೀಗೆ ಭೂಮಿಯ ಮೇಲೆ ಸಸ್ಯಗಳು ಅವತಾರ ಮಾಡಿ ಪ್ರಾಣಿಗಳ ಹುಟ್ಟಿಗೂ ಕಾರಣವಾಯಿತು. ಸಸ್ಯಗಳು ಇಲ್ಲದಿದ್ದರೆ ಪ್ರಾಣಿಗಳು ಬದುಕುವುದಿಲ್ಲ. ಒಟ್ಟಾರೆಯಾಗಿ ಸಸ್ಯಲೋಕ ಮತ್ತು ಪ್ರಾಣಿ ಲೋಕಗಳೆರಡೂ ಬದುಕಲು ಒಂದನ್ನೊಂದು ಅವಲಂಬಿಸಿಕೊಂಡಿದೆ. ಒಂದು ಹಾಳಾಗಿ ಮತ್ತೊಂದು ಉಳಿಯುವುದಕ್ಕೆ ಸಾಧ್ಯವೇ ಇಲ್ಲ ಅಂದ ಮೇಲೆ ಪ್ರಾಕೃತಿಕ ಸಂಪತ್ತನ್ನು ಉಳಿಸಿಕೊಳ್ಳುವ ಜವಬ್ದಾರಿ ಬುದ್ಧಿವಂತನಾದ ಮನುಷ್ಯನಿಗೆ ಸೇರಿದ್ದು. •

## 45. ಪಿತೃ ಋಣ ವಿಮೋಚನೆಯ ಮಹಾಲಯ

ಗರ್ಭದಾನದಿಂದ ಅಂತ್ಯೇಷ್ಟಿಯವರೆಗೆ ಒಬ್ಬ ಮನುಷ್ಯ ಶೋಡರ ಸಂಸ್ಕಾರಗಳ ಘಟ್ಟವನ್ನು ದಾಟಿ ಬರುವುದು ಹಿಂದೂ-ಧರ್ಮ ಸಂಸ್ಕೃತಿಯ ಪದ್ಧತಿ. ಪರಂಪರೆ ಅಂತ್ಯೇಷ್ಟಿಯಲ್ಲಿ ವ್ಯಕ್ತಿಯು ಮರಣೋತ್ತರ ವಿಧಿ-ವಿಧಾನಗಳು ಆತನ ಮಕ್ಕಳಿಂದ

ನೇರವೇರಲ್ಪಟ್ಟಿರುತ್ತದೆ. ಈ ಮೂಲಕ ತನ್ನ ತಂದೆಯ ಋಣವನ್ನು ಮಕ್ಕಳು ತೀರಿಸಬೇಕು. ಮಾಸಿಕ ಶ್ರಾದ್ಧ, ವರ್ಷಾಂತಿಕ ಶ್ರಾದ್ಧ ಇತ್ಯಾದಿ ಶ್ರಾದ್ಧ ತರ್ಪಣಾದಿಗಳನ್ನು ಮಾಡುವುದರ ಜತೆಗೆ ಪ್ರತಿವರ್ಷ ಶ್ರಾದ್ಧವನ್ನು ಮಾಡಬೇಕೇಂದಿದೆ. ಇದು ಪಿತೃಗಳನ್ನು ನೆನಪಿಸಿಕೊಳ್ಳುವ ಪಿತೃಪಕ್ಷವೇ ಆಗಿದೆ, ಭಾದ್ರಪದ ಮಾಸ ಕೃಷ್ಣ ಪಕ್ಷ-ಇದು ಪಿತೃ ಪಕ್ಷ. ಈ ಪಕ್ಷದ ಕೊನೆಯ ದಿನ ಮಹಾಲಯ ಅಮಾವಾಸ್ಯೆ.

ಜೀವಾತ್ಮನು ಶರೀರವನ್ನು ತ್ಯಜಿಸಿದ ಬಳಿಕ ದೇವಯಾನ( ಬ್ರಹ್ಮಲೋಕ) ಅಥವಾ ಪಿತೃಯಾನ(ಚಂದ್ರಲೋಕ)ದಲ್ಲಿ ಸಂಚರಿಸುತ್ತಾರೆ. ಎಂದು ಭಗವದ್ಗೀತೆಯಲ್ಲಿ ಹೇಳಿದೆ. ಪಿತೃಪಕ್ಷದಲ್ಲಿ ಮೂರು ತಲೆಮಾರಿನವರಿಗೆ ಅಂದರೆ ತಂದೆ, ಅಜ್ಜ, ಮುತ್ತಜ್ಜನವರಿಗೆ ಪಿಂಡ ಪ್ರದಾನ ಮಾಡಬೇಕು. ಪಿತೃಗಳು ಶ್ರಾದ್ಧಾದಿ ತರ್ಪಣಗಳನ್ನು ಕಾಯುತ್ತಿರುತ್ತಾರೆ. ಆ ದಿನ ಪಿತೃಗಳು ಪಶು-ಪಕ್ಷಿ ರೂಪದಲ್ಲಿಯೋ ಅಥವಾ ಬ್ರಾಹ್ಮಣ ರೂಪಿಯಾಗಿಯೇ ಬಂದು ಆಹಾರವನ್ನು ಸ್ವೀಕರಿಸುತ್ತಾರೆ.

ಸಮಸ್ತ ಪಿತೃಪಕ್ಷದಲ್ಲಿ ಅನ್ನದಾನದ ಮಹತ್ವವನ್ನು ಮಹಾಭಾರತದಲ್ಲಿ ಕರ್ಣನ ಕಥೆಯೊಂದು ಪುರಸ್ಕರಿಸುತ್ತದೆ. ಕರ್ಣ ದೇಹಾಂತಗೊಂಡು ಪರಲೋಕಕ್ಕೆ ಹೋದಾಗ ಆತನಿಗೆ ಉಣ್ಣಲು-ತಿನ್ನಲು ಆಹಾರವೇ ದೊರಕಲಿಲ್ಲವಂತೆ ಆದರೆ ಚಿನ್ನ, ಬೆಳ್ಳಿ ಹೇರಳವಾಗಿ ಸಿಕ್ಕಿತು. ಕಾರಣ ಕರ್ಣ ತನ್ನ ಜೀವಿತ ಕಾಲದಲ್ಲಿ ಅಪಾರ ಸುವರ್ಣ,ರಜತವನ್ನು ದಾನವಾಗಿ ನೀಡಿದ್ದ. ಆಹಾರ ಸಿಗದಿದ್ದಾಗ ಕರ್ಣ ಯಮನಲ್ಲಿ ಪ್ರಾರ್ಥಿಸಿದ. ಆಗ ಯಮನು ಮಹಾಲಯ ಪಕ್ಷದಲ್ಲಿ ಕರ್ಣನನ್ನು ಭೂಮಿಗೆ ಕಳುಹಿಸಿಕೊಟ್ಟನು. ಆ ಅವಧಿಯಲ್ಲಿ ಕರ್ಣ ಹಸಿದವರಿಗೆ ಅನ್ನದಾನವನ್ನು ಮಾಡಿ ಮರಳಿ ಪರಲೋಕಕ್ಕೆ ತೆರಳಿದನಂತೆ ಪಿತೃಪಕ್ಷದಲ್ಲಿ ಮಾಡಿದ ಅನ್ನದಾನ ಗತಿಸಿ ಹೋದ ಸಮಸ್ತ ಪಿತೃಗಣಕ್ಕೆ ಸಲ್ಲುತ್ತದೆ. •

## 46. ಭಿಕ್ಷುಕನಿಗೆ ಭಗವಂತನು ಪ್ರತ್ಯಕ್ಷನಾದುದು

ಹಿಂದೊಮ್ಮೆ ಭಿಕ್ಷುಕನೋರ್ವನಿಗೆ ಭಗವಂತನು ಪ್ರತ್ಯಕ್ಷನಾದನಂತೆ. ಕರುಣಾ ಸಾಗರವಾದ ಪರಮಾತ್ಮ- ಅಪ್ಪಾ ನಿನಗೇನು ಬೇಕು ಎಂದು ಕೇಳಿದ. ಭಿಕ್ಷುಕ ಕ್ಷಣಕಾಲ ಯೋಚಿಸಿದ ಮತ್ತೆ ಹೇಳಿದ. ಪ್ರಭು ನನಗೇನು ಬೇಕು ಎಂಬುದು ನಿನಗೆ ತಿಳಿಯದೇ? ಎಲ್ಲವನ್ನು ಬಲ್ಲ ನಿನಗೆ ನಾನೇನು ಹೇಳಲಿ? ಪರಮಾತ್ಮ ಹೇಳಿದ ಅಯ್ಯೋ ನಿನ್ನ ಮನದಿಂಗಿತವೇನು ಹೇಳು ಅನುಗ್ರಹಿಸುತ್ತೇನೆ ಎಂದ.

ಸ್ವಾಮಿ ನನಗೆ ಆನೆಯನ್ನು ದಯ ಪಾಲಿಸಿ ಎಂದು ಬೇಡಿಕೊಂಡ–ಭಿಕ್ಷುಕ. ಪರಮಾತ್ಮ ಕರುಣಿಸಿದ. ತಿರುಗಿ ತಿನ್ನುವ ಭಿಕ್ಷುಕ ಬೇಡಿದ ಆನೆ ಎಂತಹುದು. ತನ್ನ ಹೊಟ್ಟೆ ಹೊರೆದುಕೊಳ್ಳಲಾಗದ ಆತ ಆನೆಯನ್ನು ಸಾಕುವುದಕ್ಕಿದೆಯೇ? ಇಲ್ಲೊಂದು ರಹಸ್ಯವಿದೆ. ಭಿಕ್ಷುಕ ಯಾಚಿಸಿದ. ಆನೆ ಎಂದರೆ ಆರೋಗ್ಯ ಮತ್ತು ನೆಮ್ಮದಿ.(ಆ–ಆರೋಗ್ಯ, ನೆ–ನೆಮ್ಮದಿ) ನಾವು ನೆಚ್ಚಿಕೊಂಡ ಮನೆ, ಮಠ, ಆಸ್ತಿ, ಪಾಸ್ತಿ ಧನ–ಕನಕಗಳ ಸಂಗ್ರಹವೇ ನೆಮ್ಮದಿಯ ಸಾಧನಗಳೆಂದು ನಾವು ಭಾವಿಸುತ್ತೇವೆ. ಆದರೆ ಇದಾವುದೂ ನೆಮ್ಮದಿಯ ಸಾಧನವಲ್ಲ. ನೆಮ್ಮದಿಯ ಬದುಕಿಗೆ ಬೇಕಾಗಿರುವುದು ಆಧ್ಯಾತ್ಮಿಕ ಬೆಳಕು. •

## 47. ಐದು ಜನರ ಗಂಡ ಮುಂಬೈಗೆ ಹೋದಾಗ

ಒಂದೂರಿನಲ್ಲಿ ಒಬ್ಬ ಬಡರೈತ ದಂಪತಿಗಳಿದ್ದರು. ಈ ದಂಪತಿಗಳು ಕೃಷಿಯನ್ನೇ ಉದ್ಯೋಗವಾಗಿ ಅವಲಂಬಿಸಿಕೊಂಡಿದ್ದರು. ಇವರಿಗೆ ಶಾಲಿನಿ,ಮಾಲಿನಿ, ಪಾಲಿನಿ, ವಾಲಿನಿ, ಡಾಲಿನಿ ಎಂಬ 5 ಜನ ಹೆಣ್ಣು ಮಕ್ಕಳಿದ್ದರು. ಈ 5 ಜನ ಹೆಣ್ಣು ಮಕ್ಕಳು ಸುರ–ಸುಂದರಿಯರು ಹೌದು, ಸಂಗೀತಗಾರರು ಹೌದು ಅಲ್ಲದೇ ವಿದ್ಯಾವಂತರು ಹೌದು. ಇವರು ಊರಿನಲ್ಲಿ ನಡೆಯುವ ಸಭೆ–ಸಮಾರಂಭಗಳಿಗೆ ಹೋಗಿ ಸಂಗೀತವನ್ನು ಹಾಡುತ್ತಿದ್ದರು. ಪ್ರಾಯಕ್ಕೆ ಬಂದ ಇವರಿಗೆ ತಂದೆ–ತಾಯಿ ಮದುವೆ ಮಾಡುವ ಯೋಚನೆ ಮಾಡಿದರು. ಈ ವಿಷಯವನ್ನು ಮಕ್ಕಳಿಗೆ ತಿಳಿಸಿದಾಗ ಪಾತಾಳ ಲೋಕದ ನಾಗಕನ್ಯೆಯರ ಹಾಗೇ ನಾವು ಐವರು ಒಬ್ಬನನ್ನೇ ಮದುವೆಯಾಗುವುದಾಗಿ ತಿಳಿಸಿದರು. ಈ ವಿಚಾರ ಎಲ್ಲ ಕಡೆ ಪ್ರಚಾರವಾಯ್ತು. ಈ ವಿಚಾರ ತಿಳಿದ ಮುಂಬೈಯ ಒಬ್ಬ ವೈಶ್ಯ (ವ್ಯಾಪಾರಿ) ತಾನು ಮದುವೆಯಾಗುವುದಾಗಿ ಒಪ್ಪಿಕೊಂಡ, ಕೆಲವೇ ಸಮಯದಲ್ಲಿ ಮದುವೆ ನೆರವೇರಿತು. 5 ಜನ ಹೆಂಡತಿಯರ ಜತೆಯಲ್ಲಿ ಸುಖವಾಗಿ ಊರಿನಲ್ಲಿ ವಾಸವಾಗಿದ್ದನು. ಒಂದು ತಿಂಗಳು ಬಿಟ್ಟು ವ್ಯಾಪಾರಕ್ಕಾಗಿ ಮುಂಬೈಗೆ ಹೋಗುವುದಾಗಿ 5 ಜನ ಮಡದಿಯರಲ್ಲಿ ತಿಳಿಸುತ್ತಾನೆ. 5 ಜನರು ಒಪ್ಪಿ ತಮ್ಮ ಕೋರಿಕೆಯನ್ನು ಗಂಡನ ಮುಂದಿಡುತ್ತಾರೆ.

1ನೇ ಹೆಂಡತಿ : ಔಷಧ, ಭೇನೆ ಬಿದ್ದಾಗ ಮಲಗಲು ರಗ್ಗು ಮತ್ತು ಉಣ್ಣೆ ಬಟ್ಟೆ ತರಲು ಹೇಳುತ್ತಾಳೆ.

2ನೇ ಹೆಂಡತಿ : ಕಾಂಜಿವರಂ, ಧರ್ಮಾವರಂ ನವೀನ ಶೈಲಿಯ ಶಿಲ್ಕು ಸೀರೆಗಳನ್ನು ತರಲು ಹೇಳುತ್ತಾಳೆ.

3ನೇ ಹೆಂಡತಿ : ಮೂಗಿಗೆ, ಕಿವಿಗೆ, ಕೊರಳಿಗೆ, ಸೊಂಟಕ್ಕೆ ನವೀನ ಶೈಲಿಯ ಆಭರಣ ತರುವಂತೆ ಸೂಚಿಸುತ್ತಾಳೆ.

4ನೇ ಹೆಂಡತಿ : ಧಾರ್ಮಿಕ ಗ್ರಂಥ, ಜ್ಞಾನೇಶ್ವರಿ, ಭಕ್ತ ವಿಜಯ ಪುಸ್ತಕ ತರುವಂತೆ ಸೂಚಿಸುತ್ತಾಳೆ.

5ನೇ ಹೆಂಡತಿ : ನೀವು ಸುರಕ್ಷಿತವಾಗಿ ನೀವು ಮರಳಿ ಬಂದರೆ ಅಷ್ಟೇ ಸಾಕು ಎಂದು ಹೇಳುತ್ತಾಳೆ. ಒಂದು ತಿಂಗಳಲ್ಲಿ ಗಂಡ ಮರಳಿ ಮನೆಗೆ ಬರುತ್ತಾನೆ. ಅವರವರು ಹೇಳಿದ ವಸ್ತುಗಳನ್ನು ಅವರವರಿಗೆ ನೀಡುತ್ತಾನೆ 5ನೇ ಹೆಂಡತಿಯಲ್ಲಿ ಸಂಸಾರ ಮಾಡುತ್ತಾನೆ. •

# 48. ಮಾಳವ ದೇಶದ ಬ್ರಾಹ್ಮಣನ ಕಥೆ

ಪೂರ್ವಕಾಲದಲ್ಲಿ ಮಾಳವ ದೇಶದಲ್ಲಿ ಒಬ್ಬಾನೊಬ್ಬ ಧನವಂತನಾದ ಬ್ರಾಹ್ಮಣನಿದ್ದನು. ಇವನು ಕೃಷಿಯಿಂದಲೂ ವಸ್ತುಗಳ ಕ್ರಯ–ವಿಕ್ರಯದಿಂದಲೂ ಜೀವಿಸುತ್ತಾ, ಕಾಮುಕನಾಗಿಯೂ, ಕೋಪಿಷ್ಟನಾಗಿಯೂ ಇದ್ದನು. ಮನೆಗೆ ಬಂದ ನೆಂಟರನ್ನಾಗಲೀ,ಅತಿಥಿಗಳನಾಗಲೀ ಬಾಯಿ ಮಾತಿನಲ್ಲೂ ಉಪಚರಿಸುತ್ತಿರಲಿಲ್ಲ. ಬ್ರಾಹ್ಮಣನಿಗೆ ಪತ್ನಿ,ಪುತ್ರಾದಿಗಳು ಹಾಗೂ ಸಮಸ್ತ ಬಂಧುಗಳನ್ನು ಕಂಡರೆ ಆಗುತ್ತಿರಲಿಲ್ಲ. ಬ್ರಾಹ್ಮಣನು ಸಂಪಾದಿಸಿದ ಐಶ್ವರ್ಯವೆಲ್ಲಾ ಅನೇಕ ವಿಧವಾಗಿ ನಾಶವಾಯಿತು. ಅನಾವೃಷ್ಟಿಯಿಂದ ಕೃಷಿಯೆಲ್ಲಾ ಹಾಳಾಯಿತು. ಸ್ವಲ್ಪ ಹಣವನ್ನು ಸಂಬಂಧಿಗಳು ಅಪಹರಿಸಿದರು. ಸ್ವಲ್ಪ ಹಣವನ್ನು ಕಳ್ಳರು ಕದ್ದರು. ಸ್ವಲ್ಪ ಹಣವು ಭೂಮಿಯಲ್ಲಿ ಹೂತಿಟ್ಟಿದ್ದ ಸ್ಥಳದಲ್ಲಿ ಇಲ್ಲದೇ ನಷ್ಟವಾಯಿತು. ಇದರಿಂದ ಚಿಂತೆಗೊಳಗಾದನು.

ಮನುಷ್ಯನಿಗೆ ಹಣವನ್ನು ಸಂಪಾದಿಸುವ ಕಾಲದಲ್ಲಿ ಯಾವ ಪ್ರಯಾಸವುಂಟೋ ಅದನ್ನು ವೃದ್ಧಿ ಹೊಂದಿಸುವುದಕ್ಕೂ ಅದೇ ಪ್ರಯಾಸವಾಗುವುದು ಅದನ್ನು ಸಂರಕ್ಷಿಸುವ ಕಾಲದಲ್ಲಿ ಭಯವೂ,ವ್ಯಯಕಾಲದಲ್ಲಿ ಚಿಂತೆಯೂ, ಲಯ ಕಾಲದಲ್ಲಿ ಭ್ರಾಂತಿಯೂ ಉಂಟಾಗುವುದು. ಈ ಹಣಕೋಸ್ಕರವೇ ಅಣ್ಣ ತಮ್ಮಂದಿರು ಪತ್ನಿಯರೂ ತಂದೆ ಮಿತ್ರರೂ ಸಹ ಏಕಪ್ರಾಣರಾಗಿಯೂ, ಅತೀ ಪ್ರಿಯರಾಗಿಯೂ ಇದ್ದರೂ 20 ಕವಡೆಗಳಿಗಾಗಿ ಶತ್ರುಗಳಾಗುವರು, ದ್ವೇಷಾಸೂಯೆಗಳು ಹೆಚ್ಚಿ ಹೊಡೆದಾಡಿ ಪ್ರಾಣವನ್ನು ಬಿಡುವುದುಂಟೂ, ಆದ್ದರಿಂದ ಅರ್ಥದಿಂದಾಗುವ ಅನರ್ಥಗಳನ್ನು ಹೇಳುವುದಕ್ಕೆ ಅಸಾಧ್ಯ. ಈ ಬ್ರಾಹ್ಮಣ ಪತ್ನಿ–ಪುತ್ರಾದಿಗಳಿಂದಲೂ ಬಂಧುಗಳಿಂದಲೂ, ಹಣದಿಂದಲೂ ಸುಖವನ್ನು ಕಾಣದೇ ತನ್ನ ತಪ್ಪಿಗೆ ವ್ಯಸನ ಪಟ್ಟನು. •

# 49. ಮೋಹಜಿತನ ಕಥೆ

ಮೋಹಜಿತ ಕಾಡಿಗೆ ಹೋಗಿ ಒಬ್ಬ ಮುನಿಯನ್ನು ಆಶ್ರಯಿಸಿ ತನಗೆ ಅಧ್ಯಾತ್ಮಿಕ ಮಾರ್ಗದರ್ಶನ ಮಾಡಬೇಕೆಂದು ಪ್ರಾರ್ಥಿಸಿದ. ನಿನ್ನ ಹೆಸರು ಸೂಚಿಸುವಂತೆ ನೀನು ಮೋಹವನ್ನು ಗೆದ್ದಿದ್ದೀಯಾ? ಎಂದು ಮುನಿ ಅವನನ್ನು ಪ್ರಶ್ನಿಸಿದರು. ಅದಕ್ಕೆ ಅವನು ನಾನೊಬ್ಬನೇ ಅಲ್ಲ. ನನ್ನ ರಾಜ್ಯದಲ್ಲಿ ಎಲ್ಲರೂ ಮೋಹವನ್ನು ಗೆದ್ದಿದ್ದಾರೆ ಎಂದನು ಅದನ್ನು ಪರೀಕ್ಷಿಸಬೇಕು ಅನಿಸಿತು ಮುನಿಗೆ. ಅವನು ಒಂದು ಆಟವನ್ನು ಹೂಡಿದ. ರಾಜಕುಮಾರ ಮೋಹಜಿತನ ಪೋಷಾಕನ್ನು ರಕ್ತದಲ್ಲಿ ಅದ್ದಿ ಅದನ್ನು ಹಿಡಿದು ಓಡುತ್ತಾ ಅರಮನೆಗೆ ಹೋದ. ಯಾರೋ ದುಷ್ಟರು ರಾಜಕುಮಾರನನ್ನು ಕಾಡಿನಲ್ಲಿ ಕೊಲೆ ಮಾಡಿದ್ದಾರೆ ಎನ್ನುವ ಭಯಂಕರ ಕಥೆ ಕಟ್ಟಿ ಹೇಳಿದ.

ಅರಮನೆಯ ಬಾಗಿಲಲಿದ್ದ ಸೇವಕಿ ಆ ದುಃಖದ ವಾರ್ತೆಯನ್ನು ತಿಳಿಸಲು ರಾಣಿ ವಾಸದತ್ತ ಧಾವಿಸುವ ಬದಲು ಶಾಂತವಾಗಿ ನಿಂತಲ್ಲೇ ನಿಂತು "ಅವನು ಹುಟ್ಟಿದ್ದ. ಸತ್ತು ಹೋದ, ಇದರಲ್ಲೇನಾಶ್ಚರ್ಯ", ಮಾಡುತ್ತಿರುವ ಕೆಲಸವನ್ನು ಬಿಟ್ಟು ಹೋಗಿ ಮಹಾರಾಣಿಗೆ ತಿಳಿಸುವಂತ ಏನು ಮಹಾ ಸುದ್ದಿ ಇದು ಎಂದಳು.

ಮುನಿ ಹೇಗೋ ಪ್ರಯತ್ನ ಪಟ್ಟು ಅರಮನೆಯೊಳಕ್ಕೆ ಹೋಗಿ ರಾಜ–ರಾಣಿಯನ್ನು ಕಂಡು ಅವರಿಗೆ ಈ ಸುದ್ದಿಯನ್ನು ತಿಳಿಸಿದ. ಅವರ ಮುಖದ ಮೇಲೆ ದು:ಖದ ಸುಳಿವೇ ಇಲ್ಲದೆ ಅವಿಚಲಿತರಾಗಿ ಕುಳಿತ್ತಿದ್ದರು. "ಮರದಲ್ಲಿ ವಿಶ್ರಾಂತಿಗಾಗಿ ಬಂದು ಕುಳಿತ್ತಿದ್ದ ಹಕ್ಕಿ ಹಾರಿ ಹೋಯಿತು" ಎಂದ ರಾಜ ಉದ್ವೇಗವಿಲ್ಲದೇ,

ಪ್ರಪಂಚ ಒಂದು ಛತ್ರ, ಪ್ರವಾಸಿಗಳು ರಾತ್ರಿ ಇಲ್ಲಿ ತಂಗುತ್ತಾರೆ. ಬೆಳಗಾಗುತ್ತಲೇ ತಮ್ಮ ಹಾದಿ ಹಿಡಿದು ಹೊರಡುತ್ತಾರೆ. "ಛತ್ರದಲ್ಲಿರುವಷ್ಟು ಕಾಲ ನಾವು ಒಬ್ಬರಿಗೊಬ್ಬರು ಸಂಬಂಧ." ಸ್ನೇಹ ಕಲ್ಪಿಸಿಕೊಂಡು ನೆಂಟರಿಷ್ಟರೆಂದು ಕೊಳ್ಳುತ್ತೇವೆ ಎಂದಳು ರಾಣಿ.

ರಾಜಕುಮಾರನ ಪತ್ನಿಯು ದುಃಖ ಪಡಲಿಲ್ಲ. "ಗಂಡ–ಹೆಂಡಿರೆಂದರೆ ಪ್ರವಾಹದಲ್ಲಿ ತೇಲಿಹೋಗುವ ಎರಡು ಮರದ ತುಂಡುಗಳು" ಪ್ರವಾಹದಲ್ಲಿ ಸ್ವಲ್ಪ ಹೊತ್ತು ಜತೆಯಾಗಿ ಹೋಗುತ್ತದೆ ಒಂದು ಅಲೆ ಬಂದು ಎರಡನ್ನು ಬೇರೆ–ಬೇರೆಯಾಗಿ ತಮ್ಮದೇ ಪ್ರತ್ಯೇಕ ವೇಗ–ವಿಧಾನಗಳಿಂದ ಸಾಗುತ್ತಾ ಹೋಗಿ ಸಮುದ್ರವನ್ನು ಸೇರುತ್ತವೆ. ಎರಡೂ ಬೇರೆಬೇರೆಯಾದುವೆಂದು ಪಶ್ಚಾತ್ತಾಪ ಪಡಬೇಕಾಗಿಲ್ಲ. ಅದು ಸಹಜ ಎಂದಳು ಆ ಸಾಧ್ವೀಮಣಿ.

ರಾಜ, ರಾಣಿ, ರಾಜಕುಮಾರನ ಪತ್ನಿ ಮತ್ತು ಅವನ ಪ್ರಜೆಗಳಲಿದ್ದ ದೃಢ ವೈರಾಗ್ಯವನ್ನು ಕಂಡು ಮುನಿಗೆ ಮಹದಾನಂದವಾಯಿತು. ಹಿಂತಿರುಗಿ ಕಾಡಿಗೆ ಬಂದು ರಾಜಕುಮಾರ ಮೋಹಜಿತನನ್ನು ಕುರಿತು "ರಾಜಕುಮಾರ, ನಿಮ್ಮ ರಾಜ್ಯವನ್ನು ಶತ್ರುಗಳು ಸ್ವಾಧೀನಪಡಿಸಿಕೊಂಡು ಪ್ರಜೆಗಳನ್ನು ತಮ್ಮಧೀನ

ರಾಜ್ಯವನ್ನು ಶತ್ರುಗಳು ಸ್ವಾಧೀನಪಡಿಸಿಕೊಂಡು ಪ್ರಜೆಗಳನ್ನು ತಮ್ಮ ಅಧೀನ ಮಾಡಿಕೊಂಡಿದ್ದಾರೆ, ನಾನು ಕಣ್ಣಾರೆ ನೋಡಿ ಬಂದೆ ಎಂದು ಹೇಳಿದ. ಮೋಹಜಿತ ವಿಚಲಿತನಾಗಲಿಲ್ಲ. ಶಾಂತವಾಗಿಯೇ ಹೇಳಿದ "ರಾಜಕೋಶಗಳು ಅಶಾಶ್ವತ, ನೀರ್ಗುಳ್ಳೆಯಂತೆ ಸ್ವಲ್ಪ ಕಾಲ ಇದ್ದು ಹೋಗುವಂತದ್ದು". ಆದ್ದರಿಂದ ಹೋದರೆ ಹೋಗಲಿ ಚಿಂತೆ ಇಲ್ಲ. ಆದರೆ ಮುಂದೆಂದಿಗೂ ನಾಶವಾಗದ ಶಾಶ್ವತವಾದ ಸತ್ಯ ವಸ್ತುವನ್ನು ಪಡೆಯಲು ನೀವು ನನಗೆ ಮಾರ್ಗದರ್ಶನ ಕೊಡಬೇಕು ಎಂದು ಕೈ ಮುಗಿದು ಪ್ರಾರ್ಥಿಸಿದ.

●

## 50. ಶ್ರೀ ಭದ್ರಕಾಳಿ

ರಾಕ್ಷಸರ ಉಪಟಳ ಹೆಚ್ಚಾದಾಗಲೆಲ್ಲಾ ಒಂದಿಲ್ಲೊಂದು ಅವತಾರತಾಳಿ ಲೋಕಕಲ್ಯಾಣ ಮಾಡಿದ ಬಗ್ಗೆ ಪುರಾಣದಲ್ಲಿ ಅನೇಕ ದಾಖಲೆ ದೊರಕುತ್ತದೆ. ಅಂತೆಯೇ ಸಿಂಧೂ ದ್ವೀಪವನ್ನು ಆಳುತ್ತಿದ್ದ ವೇತ್ರಾಸುರನು ಮೂರು ಲೋಕವನ್ನು ತನ್ನ ಶಕ್ತಿ ಪರಾಕ್ರಮಗಳಿಂದ ಮೂರಾಬಟ್ಟೆ ಮಾಡಿದಾಗ ಹರಿ–ಹರ–ಬ್ರಹ್ಮಾದಿಗಳು ಅತ್ಯುಗ್ರರಾದರು. ಈ ಉಗ್ರತ್ವದಿಂದ ಒಂದು ಅಮೋಘ ಕಾಂತಿ ಅವರ ಮೊಗದಿಂದ ಹೊರಹೊಮ್ಮಿತು. ಈ ಕಾಂತಿ ತಟ್ಟನೆ ಒಂದು ಗಂಭೀರ ಹೆಣ್ಣಿನ ರೂಪತಳೆಯಿತು. ವೇತ್ರಾಸುರನನ್ನು ಜಯಿಸಲು ಇವಳೇ ತಕ್ಕವಳು ಎಂದು ಭಾವಿಸಿದ ದೇವತೆಗಳು ಅತಿ ಶ್ರೇಷ್ಠವಾದಂತಹ ಒಂದೊಂದು ಆಯುಧವನ್ನು ಮತ್ತು ತಮ್ಮ ವಿಶೇಷ ಶಕ್ತಿಯನ್ನು ನೀಡಿದರು. ಹೀಗೆ ಸರ್ವಾಯುಧಗಳನ್ನು ಧರಿಸಿ, ಆ ಸ್ತ್ರೀ ರೂಪವನ್ನು ಜಯಿಸುವುದು ಮೂಜಗದಲ್ಲಿ ಯಾರಿಗೂ ಸಾಧ್ಯವಾಗದಿರುವುದರಿಂದಲೂ ಆಕೆ ಅತಿ ದುರ್ಗಮಳಾದುದರಿಂದಲೂ ಆ ವೀರ ರಮಣಿಗೆ "ದುರ್ಗೆ" ಎಂದು ಕರೆದರು. ವೇತ್ರಾಸುರನನ್ನು ಸಂಹರಿಸಿದ ದುರ್ಗೆ ಮುಂದೆ "ಭದ್ರಕಾಳಿ"ಯಾಗಿ ಶುಂಭ, ನಿಶುಂಭರನ್ನು ಸಂಹರಿಸುತ್ತಾಳೆ. ದೇವಿ ಚರಿತ್ರೆಯ ಸ್ಮರಣೆಯಿಂದಲೇ ಸಂಕಟಗಳ ನಿವಾರಣೆಯಾಗುತ್ತದೆ.

●

# 51. ಕುಡುಕರ ಕಥೆ

ಪ್ರತಿಯೊಬ್ಬರು ಕುಡಿಯಲೇಬೇಕು ಕೆಲವರು ಹಾಲು ಕುಡಿಯುತ್ತಾರೆ. ಇನ್ನು ಕೆಲವರು ಆಲ್ಕೋಹಾಲು ಕುಡಿಯತ್ತಾರೆ. ಹಾಲು ಮತ್ತು ಆಲ್ಕೋಹಾಲು ದ್ರವ ಜಾತಿಗೆ ಸೇರಿದೆ. ಹಾಲಿನಲ್ಲಿ ಕೊಬ್ಬಿದೆ. ಆಲ್ಕೋಹಾಲಿನಲ್ಲಿ ಅಮಲೂ ಇದೆ. ಹಾಲಿಗಿಂತಲೂ ಹೆಚ್ಚಾಗಿ ಬಳಕೆಯಾಗುವುದು ಆಲ್ಕೋಹಾಲು. ಹಾಲು ಆರೋಗ್ಯಕ್ಕೆ ಒಳ್ಳೆಯದು ಇದು ಸಸ್ಯಹಾರಿ. ಆಲ್ಕೋಹಾಲು ಆರೋಗ್ಯಕ್ಕೆ ಕೆಟ್ಟದ್ದು. ಇದನ್ನು ನಾನ್ವೆಜ್ ಎಂತಲೇ ಕರೆಯುತ್ತಾರೆ. ಆಲ್ಕೋಹಾಲನ್ನು ಕುಡಿದೇ ಸತ್ತವರಿದ್ದಾರೆ. ಕುಡಿಯುವ ಚಟವಿದ್ದವರಿಗೆ ಸತ್ತ ಮೇಲೂ ಸಂತೃಪ್ತಿಯಾಗಲೆಂದು ಆಲ್ಕೋಹಾಲನ್ನು ತರಿಸಿ ಸತ್ತವರ ಊಟದ ಜತೆ ಬಡಿಸುವ ಕ್ರಮವಿದೆ. ಚೀಪರ್ ಕ್ಲಾಸ್ ಆಲ್ಕೋಹಾಲು ಬಡವರ ಪೇಯ ಬಾರಿ ರೇಟಿನ ಫಾರಿನ್ ವಿಸ್ಕಿ ಕುಡಿಯುವವರ ಗತ್ತೇ ಬೇರೆ. ಶ್ರೀಮಂತರು ಮನೆಯೊಳಗೆ ದಿನ ಪೂರ್ತಿ ಕುಡಿದರೂ ಕುಡುಕ ಅನ್ನಿಸಿಕೊಳ್ಳುವುದಿಲ್ಲ. ಬಡವ ಒಂದು ಹೊತ್ತು ಕುಡಿದರೂ ಕುಡುಕ ಅನ್ನಿಸಿಕೊಳ್ಳುತ್ತಾನೆ. ದೊಡ್ಡವರ ಪಾರ್ಟಿಗಳಲ್ಲಿ ಕುಡಿತ ಸೋಷಿಯಲ್, ಬಡವರ ಪಾರ್ಟಿಗಳಲ್ಲಿ ಕುಡಿತ ವ್ಯಸನ. ಕುಡಿದ ಮೇಲೆ ಅವನು ಮನಷ್ಯನೇ ಅಲ್ಲ. ಕುಡಿಯದಿದ್ದರೆ ಅವನಷ್ಟು ಒಳ್ಳೆಯವನು ಯಾರೂ ಇಲ್ಲ. ಕುಡಿತಕ್ಕೆ ಹಲವಾರು ಸಮಸ್ಯೆಗಳು ಇವೆ.

ಕುಡಿ–ಕುಡಿ–ಕಡಿ–ಎಡ್ದಷ್ಟ್–ಕುಡಿ
ಒಂದು ದರಾಂ ಕುಡಿ ಸಾಕಾ– ಅಹಾ ಕುಡಿತದ ಮಜಾ ನೋಡಾ
ದಿನವಿಡೀ ಮಾಡಿದ ದುಡಿತ–ಮೈ ಕೈ ಎಲ್ಲಾ ಜಗಿತ
ಆ ಜಗಿತಕ್ಕೆ ಈ ನನ್ ಕುಡಿತ
ಕುಡಿದು–ಕುಡಿದು ತಡೆ–ತಡೆದು ತಡೆದು ಕುಡಿ
ಅಹಾ ಕುಡಿತದ ಮಜ ನೋಡಾ
ಒಳಗೆ ಸೇರಿದರೆ ಗುಂಡು ಹುಡುಗಿಯಾಗುವಳು ಗಂಡು
ಓ ಮಲ್ಲಿ ಮಧುರ ಗೀತಾ ಹಾಡಾ

ಬಾರೀ ಖುಷಿ ನನ್ಗೆ– ನನ್ನ ಹೆಂಡ್ತಿ ಕಂಡ್ರೆ
ರಾತ್ರಿ ಕುಡ್ಕೊಂಡ್ ಬಂದ್ರೆ ನನ್ಗೆ ಬೈಯ್ಯೋದಿಲ್ಲಾ.

ಎಣ್ಣೆ ಬೇಕು ಅಣ್ಣ–ಎಣ್ಣೆ ಬೇಕು
ಬಾರು ತೆಗೆಸು ಅಣ್ಣಾ– ಬಾರು ತೆಗೆಸು
ಕಣ್ತುಂಬಾ ನೀರು–ಬಾಯ್ತುಂಬಾ ಬೀರು
ನಿಜವಾಗ್ಲೂ ಬಾರು –ಗಂಡ್ ಮಕ್ಳ್ ತವರೂರು
ಎಣ್ಣೆ ಬೇಕು ಅಣ್ಣಾ ಎಣ್ಣೆ ಬೇಕು.
ಬಾರು ತೆಗೆಸು ಅಣ್ಣಾ– ಬಾರು ತೆಗೆಸು
ಎತ್ತುತ್ತಾರೋ ಎಣ್ಣೆ ಎತ್ತುತ್ತಾರೋ
ಊರಲ್ಲಿ ಬಾರಲ್ಲಿ ಎಣ್ಣೆ ಎತ್ತುತ್ತಾರೋ
ಸಂತೋಷಕ್ಕೂ ಎಣ್ಣೆ– ಬೇಸರಕ್ಕೂ ಎಣ್ಣೆ
ಎತ್ತುತ್ತಾರೋ ಎಣ್ಣೆ– ಎತ್ತುತ್ತಾರೋ
ಪಾಸಾದ್ರೂ ಎಣ್ಣೆ ಪೇಲಾದ್ರೂ ಎಣ್ಣೆ
ಎತ್ತುತ್ತಾರೋ ಎಣ್ಣೆ– ಎತ್ತುತ್ತಾರೋ
ಕೆಲ್ಸ ಸಿಕ್ಕಿದ್ರೂ ಎಣ್ಣೆ ಕೆಲ್ಸ ಸಿಗದಿದ್ರೂ ಎಣ್ಣೆ
ಎತ್ತುತ್ತಾರೋ ಎಣ್ಣೆ– ಎತ್ತುತ್ತಾರೋ
ಮದ್ರಂಗಿಗೂ ಎಣ್ಣೆ ಮದ್ವೆಗೂ ಎಣ್ಣೆ
ಎತ್ತುತ್ತಾರೋ ಎಣ್ಣೆ– ಎತ್ತುತ್ತಾರೋ
ಮಕ್ಕಳಾದ್ರೂ ಎಣ್ಣೆ ಮಕ್ಕಳಾಗದಿದ್ರೂ ಎಣ್ಣೆ
ಎತ್ತುತ್ತಾರೋ ಎಣ್ಣೆ– ಎತ್ತುತ್ತಾರೋ
ಬರ್ತ್‌ಡೇಗೂ ಎಣ್ಣೆ– ಬೊಜ್ಜಕ್ಕೂ ಎಣ್ಣೆ
ಎತ್ತುತ್ತಾರೋ ಎಣ್ಣೆ– ಎತ್ತುತ್ತಾರೋ
ಹಬ್ಬಕ್ಕೂ ಎಣ್ಣೆ ಜಾತ್ರೆಗೂ ಎಣ್ಣೆ
ಎತ್ತುತ್ತಾರೋ ಎಣ್ಣೆ– ಎತ್ತುತ್ತಾರೋ
ನೋವಿಗೂ ಎಣ್ಣೆ ಮೈ ಕೈ ಜಗಿತಕ್ಕೂ ಎಣ್ಣೆ
ಎತ್ತುತ್ತಾರೋ ಎಣ್ಣೆ– ಎತ್ತುತ್ತಾರೋ
ನಿದ್ರೆ ಬಾರದಿದ್ರೂ ಎಣ್ಣೆ ನಿದ್ರೆ ಬರುವುದಕ್ಕೂ ಎಣ್ಣೆ
ಎತ್ತುತ್ತಾರೋ ಎಣ್ಣೆ– ಎತ್ತುತ್ತಾರೋ

ಕುಡಿಯುವುದೇ ನನ್ನ ಕಾಯಕ
ಕುಡುಕರಿಗೆಲ್ಲಾ ನಾಯಕ
ಅದೇ ನನ್ನ ಜಾತಕ
ಮಾಡುವ ಮಾಡುವ ಎಣ್ಣೆ ಪಾರ್ಟಿ ಮಾಡುವಾ
ಮಾಡುವಾ ಮಾಡುವಾ ಎಲ್ಲಿ ಮಾಡುವಾ
ಅಲ್ಲಿ ಮಡುವಾ ಇಲ್ಲಿ ಮಡುವಾ
ಬಾರಲ್ಲಿ ಮಾಡುವ–ಊರಲ್ಲಿ ಮಾಡುವ
ಮೈಸೂರಲ್ಲಿ ಮಾಡುವ ಮಂಡ್ಯದಲ್ಲಿ ಮಾಡುವ
ಮಾಡುವಾ ಮಾಡುವಾ ಎಣ್ಣೆ ಪಾರ್ಟಿ ಮಾಡುವಾ
ಎಣ್ಣೆ ನಮ್ಮದು ಊಟ ನಿಮ್ಮದು
ಇಲ್ಲಿ ಊಟ ನಮ್ಮದು ಎಣ್ಣೆ ನಿಮ್ಮದು
ಮಾಡುವಾ ಮಾಡುವಾ ಎಣ್ಣೆ ಪಾರ್ಟಿ ಮಾಡುವಾ

ಕುಡುಕರ ಸಮಸ್ಯೆ ಕುಡುಕರಲ್ಲದವರಿಗೆ ಹೇಗೆ ಗೊತ್ತಾಗುತ್ತದೆ. ನಾವು ಕೆಳಗಿನವರು ಅಂದರೆ ಭೂಲೋಕದವರು ಕುಡಿಯುವುದು ಸಾಮಾನ್ಯ ಮೇಲಿನ ಸುರೇಂದ್ರ ಭೂಲೋಕಕ್ಕೆ ಬಂದು ಮದುಪಾನ ಮಾಡಿ ಕೈಲಾಸಕ್ಕೆ ಹೋಗಿ ಮತ್ತಿನಲ್ಲಿ ಶಿವನ ತಲೆಗೆ ಹೊಡೆದ ವಿಷಯ ಗೊತ್ತಿರಬೇಕು ಹೆಂಗಸರಿಗೆ ಹೆರಿಗೆ ಸಮಸ್ಯೆಯಾದರೆ ಕುಡುಕರಿಗೆ ತೆರಿಗೆ ಸಮಸ್ಯೆ, ಕರೆಕ್ಟಾಗಿ ಜಿ.ಎಸ್.ಟಿ ಕಟ್ಟುವವರು ಕುಡುಕರು.

**ಕುಡುಕರ ಬೇಡಿಕೆಗಳು :**

1. ಕುಡುಕರ ಸಾಲ ಮನ್ನಾ ಮಾಡಬೇಕು
2. ಕುಡುಕರಿಗೆ ರಾತ್ರಿ ಉಳಿದುಕೊಳ್ಳಲು ಬಂಗ್ಲೆ ಕಟ್ಟಿಸಿ ಕೊಡಬೇಕು.
3. ಕುಡುಕರಿಗೆ ಉಚಿತವಾಗಿ 30–60–90 ನಂಬ್ರದ ಪೋನ್ ಕೊಡಿಸಬೇಕು.

ಒಮ್ಮೆ ಬಲರಾಮನು ಮದ್ಯದೇವತೆ ವಾರುಣಿಯಿಂದ ಪ್ರೇರಿತನಾಗಿ ಕದಂಬ ವೃಕ್ಷದಿಂದ ಸುರಿಯುತ್ತಿದ್ದ ಮದ್ಯವನ್ನು ಗೋಪಿಯರೊಡನೆ ಸೇರಿ ಯಥೇಚ್ಛವಾಗಿ ಕುಡಿದು ಹಾಡುತ್ತಾ ಕುಣಿಯುತ್ತಾ ನರ್ತಿಸುತ್ತಿದ್ದನು.ಇನ್ನೊಮ್ಮೆ ಬಲರಾಮನು ರೈವತ ಪರ್ವತದ ಉದ್ಯಾವನದಲ್ಲಿ ಪಾನಮತ್ತನಾಗಿ ಹೆಂಡತಿ ರೇವತಿಯೊಡನೆ ವಿಹರಿಸುತ್ತಿರಲು ಒಂದು ಕಪಿಯು ಬಲರಾಮನ ಹಲಾಯುಧ ಮುಸಲಾಯುಧಗಳನ್ನು ಅಪಹರಿಸಿದ್ದು ಉಂಟು ಶ್ರೀ ಕೃಷ್ಣನು ಪ್ರಬಾಸಕ್ಷೇತ್ರಕ್ಕೆ ಹೋದ ನಂತರ ಯಾದವರೆಲ್ಲರೂ ಮದ್ಯಪಾನಾಶಕ್ತರಾಗಿ ಅವರೊಳಗೆ ಕಲಹವನ್ನು ಆರಂಭಿಸಿದರು.

•

# 52. ಭತ್ತ ಕುಟ್ಟುವ ಹಾಡುಗಳು

ಸೀತೆ ಸಿಕ್ಕುವವಳಲ್ಲ – ರಾವಣ ಬಿಡುವವನಲ್ಲ
ಅರಣ್ಯದಲ್ಲೂ ಚೌದಿಯು
ಅರಣ್ಯದಲ್ಲೇ ಚೌದಿ । ಸೀತಮ್ಮನ
ಸೆರಗು ಮುಟ್ಟಿದರೂ ಉರಿದೋಷ ।

ಲಂಕಾ ಪಟ್ಟಣದಲ್ಲಿ ಎಂತ ದೀವಿಗಿ ಬೆಳಕು
ತಾಯಿ ಸೀತಮ್ಮನ ಕೈಕಡಗು
ತಾಯಿ ಸೀತಮ್ಮನ ಕೈಕಡಗದ । ಬೆಳಕಿಗೂ
ಹಣ್ಣೆಗಾರಿದನೆ ಹನುಮಂತ ।

ಅಣ್ಣ ದಂಡಿಗೆ ಹೋದ ದುಂಡು ಮಲ್ಲಿಗಿ ತಂದ
ತಂಗಿ ಕೇಳಿದರೆ ಎಡಿಯೆಂಬ
ತಂಗಿ ಕೇಳಿದರೆ ಎಡಿಯೆಂಬ । ಅಣ್ಣಯ್ಯ
ಮಡದಿ ಕೇಳಿದರೆ ಮುಡಿಯೆಂಬ

ವಾಲಿ ಕೇಮಿನಮ್ಮಕ್ಕ ಬಳಗೇನೇ ಮಾಡುತೆ
ಹೆರಗ ಕಾಣೆ ನಿನ್ನ ಮಗನಾಟೋ
ಹೆರಗ ಕಾಣೆ ನಿನ್ನ ಮಗನಾಟೋ । ಬಾಲಯ್ಯ
ಗುರುಗಂಜಿ ಮರಕೆ ಗುರಿಯಿಟ್ಟ

ಮಂಗನ ಬೀಸುವ ಜಂಗಮು ಎಲ್ಲಿಗ್ ಹೋದ
ಮಂಗ ಬಂದಿಳಿದು ಬೈಲಿಗೋತ್
ಮಂಗ ಬಂದಿಳಿದು ಬೈಲಿಗೋತ್ ಅಣ್ಣಯ್ಯ
ತೆಂಗಿನ ಫಲವೇ ಕೆಡದಿಗೂ ॥

ಹಟ್ಟಿಯ ಹಣೆಯಲ್ಲಿ ನಿಂತಕೊ । ಬಾಲಯ್ಯ
ಕಟ್ಟಿದ ಕೈಲುತಿನೆ ಕರಕೊಂಬಿ
ಕಟ್ಟಿದ ಕೈಲುತಿನೆ ಕರಕೊಂಬಿ । ನಿನ ಕೆಮಿಯ
ವಜಿರದೊಂಟಿ ಬೆಳಕಿಗೂ
ಹಾಂ ಹೂಂ ಹಾಂ ಹೂಂ



84 ಲಕ್ಷ ಜೀವ ಜಂತುಗಳಲ್ಲಿ ವಸನ–ಅಂದರೆ ವಸ್ತ್ರ ಧರಿಸುವುದು ಮಾನವರು ಮಾತ್ರ, ಇವರೆಲ್ಲರಿಗೂ ವಸ್ತ್ರವನ್ನು ತಯಾರಿಸಿ ಕೊಡುತ್ತಿದ್ದವರು. ನೇಕಾರ ಸಮಾಜದವರು. ಇವರಲ್ಲಿ ದೇವಾಂಗ, ಪದ್ಮಶಾಲಿ, ಸೆಟ್ಟಿಗಾರ್ ಎಂಬುದಾಗಿ ಅನೇಕ ಜಾತಿಗಳಿದ್ದು ಮೂಲತಃ ಕಂಚಿಯಿಂದ ಕರಾವಳಿಗೆ ಬಂದವರಾಗಿರುತ್ತಾರೆ.

ನೇಕಾರ ಸಮಾಜಕ್ಕೆ ಸೇರಿದ ಶ್ರೀ ಕೆ. ಗಣಪಯ್ಯ ಶೆಟ್ಟಿಗಾರರು ಕುಂದಾಪುರ ತಾಲೂಕು ಕಾಳಾವರ ಗ್ರಾಮದಲ್ಲಿ ಜನಿಸಿ ಪಿಯುಸಿ ಶಿಕ್ಷಣದವರೆಗೆ ವ್ಯಾಸಂಗ ಮಾಡಿ ನಂತರ ಪೋಲಿಸ್ ಸಹಾಯಕ ಉಪನಿರೀಕ್ಷಕರಾಗಿ ಸೇವಾ ನಿವೃತ್ತಿ ಹೊಂದಿರುತ್ತಾರೆ.

ನಿವೃತ್ತಿಯ ಬಳಿಕ ಕಾಳಾವರ ವನ ದುರ್ಗಾದೇವಿ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಮಾಜಿ ಸದಸ್ಯರಾಗಿದ್ದಲ್ಲದೇ, ಕುಲದೇವಸ್ಥಾನ ಶ್ರೀ ಬ್ರಹ್ಮಲಿಂಗ ವೀರಭದ್ರ, ದುರ್ಗಾಪರಮೇಶ್ವರಿ ದೇವಸ್ಥಾನ ಬಾರ್ಕೂರು, ಸುಣ್ಣಾರಿ ವಿವೇಕೋದಯ ಹಿರಿಯ ಪ್ರಾಥಮಿಕ ಶಾಲೆಯ ಹಳೆವಿದ್ಯಾರ್ಥಿ ಸಂಘ, ಉಡುಪಿ ಜಿಲ್ಲೆಯ ಪೋಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘಗಳಲ್ಲಿ ಸಕ್ರಿಯ ಪಾತ್ರದಾರರಾಗಿರುತ್ತಾರೆ. ಅಲ್ಲದೇ ಕೋಟೇಶ್ವರ ವಲಯ ಪದ್ಮಶಾಲಿ ಸಮಾಜ ಸಂಘ ಇದರ ಸಂಚಾಲಕರಾಗಿ, ಉಪಾಧ್ಯಕ್ಷರಾಗಿ, ಗೌರವಾಧ್ಯಕ್ಷರಾಗಿ ಸೇವೆ ಸಲ್ಲಿಸಿರುತ್ತಾರೆ. ಕಾಳಾವರ ವಲಯ ತೆಂಗು ಉತ್ಪಾದಕರ ಸೌಹಾರ್ದ ಸೊಸೈಟಿಯಲ್ಲಿ ಜೊತೆ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಶ್ರೀ ಕ್ಷೇತ್ರ ಧರ್ಮಸ್ಥಳದಿಂದ ಪ್ರಸಾರವಾಗುವ ಮಂಜುವಾಣಿ ಮಾಸ ಪತ್ರಿಕೆಯಲ್ಲಿ ಬರಹಗಾರರಾಗಿ "ನಿನಗಾಗಿಯೂ ಬದುಕು", "ಪರರಿಗಾಗಿಯೂ ಬದುಕು", "ತ್ಯಾಗವೇ ಶ್ರೇಷ್ಠವಾದ ಯೋಗ", "ಗುರು–ಅರ್ಥ ಮತ್ತು ವಿಸ್ತಾರ","ಮಾತೆ ಮಮತೆಯ ಮೂರ್ತಿ", "ದಾಂಪತ್ಯ ಜೀವನದಲ್ಲಿ ಹೆಣ್ಣಿನ ಹಿರಿಮೆ", ಎಂಬ ಲೇಖನವನ್ನು ಪ್ರಕಟಿಸಿದ್ದು, ನಂತರ "ನಾವು ದೇವರನ್ನು ನಂಬುವ ಹಾಗೂ ಉಪಕಥೆಗಳು ಎಂಬ ಪುಸ್ತಕವನ್ನು ಬಿಡುಗಡೆಗೊಳಿಸಿ ಆಸ್ತಿಕರ ಮನಗೆದ್ದಿರುವುದು ಹೆಮ್ಮೆಯ ಸಂಗತಿ.

ಶ್ರೀಮತಿ ಅನುಸೂಯ-ಸುಧಾಕರ್
ವಕ್ವಾಡಿ